# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ನವೆಂಬರ್ 26, 2024

ಸಂಪುಟ : 51 ಸಂಚಿಕೆ : 193 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಇಂದು ಹೈಕೋರ್ಟ್‌ಗೆ ಮುಡಾ ವರದಿ

ಬೆಂಗಳೂರು, ನ. 25 - ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) 14 ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ನವೆಂಬರ್ 26ರಂದು 'ಸದ್ಯದ ಸ್ಥಿತಿ' (ಸ್ಟೇಟಸ್ ರಿಪೋರ್ಟ್) ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಲಿದೆ.

ಬಿಡಿ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಅವ್ಯವಹಾರ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಅರ್ಜಿಯ ಮುಂದುವರೆದ ವಿಚಾರಣೆ ಮಂಗಳವಾರ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಬರಲಿದೆ.

ಈ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವುದಕ್ಕೂ ಮುನ್ನ ತಮಗೆ, ಲೋಕಾಯುಕ್ತ ಬಿಡಿ ನಿವೇಶನಗಳ ಹಂಚಿಕೆ



ವಿವಾದಕ್ಕೆ ಸಂಬಂಧಿಸಿದಂತೆ ನಡೆಸಿರುವ ತನಿಖಾ ವರದಿಯನ್ನು ಪೀಠಕ್ಕೆ ಸಲ್ಲಿಸುವಂತೆ ನ್ಯಾಯಮೂರ್ತಿಗಳು ಈ ಹಿಂದಿನ ವಿಚಾರಣೆ ವೇಳೆ ಸೂಚಿಸಿದ್ದರು.

ನ್ಯಾಯಾಲಯದ ಆದೇಶದಂತೆ, ಲೋಕಾಯುಕ್ತ ಇದುವರೆಗೆ ನಡೆಸಿರುವ ತನಿಖಾ ವರದಿ ಜೊತೆಗೆ ಪೂರಕ ದಾಖಲೆಗಳನ್ನು ಸಲ್ಲಿಸಲಿದೆ. ನ್ಯಾಯಾಲಯದ ಆದೇಶದಂತೆ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದಾರೆ, ಆದರೆ, ತನಿಖೆ ಇನ್ನೂ ಪೂರ್ಣಗೊಂಡಿಲ್ಲವಾದರೂ ಸದ್ಯದ ಸ್ಥಿತಿಯನ್ನು ಸಲ್ಲಿಸಲಿದ್ದಾರೆ.

14 ಬಿಡಿ ನಿವೇಶನಗಳ ಹಂಚಿಕೆ ವಿವಾದದ ಮೊದಲ ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ, 2ನೇ ಆರೋಪಿ ಅವರ ಪತ್ನಿ ಪಾರ್ವತಿ ಹಾಗೂ ಭೂಮಾಲೀಕತ್ವ ಹೊಂದಿದವರು, ಮುಡಾದಲ್ಲಿ ಕಾರ್ಯನಿರ್ವಹಿಸಿದ ಮಾಜಿ ಮತ್ತು ಹಾಲಿ ಅಧಿಕಾರಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿರುವ ಬಗ್ಗೆ ಮಾಹಿತಿ ಸಲ್ಲಿಸಲಿದ್ದಾರೆ.

ನಿವೇಶನ ಹಂಚಿಕೆ ಮಾಡಿದ ಹಿಂದಿನ ಮುಡಾ ಆಯುಕ್ತ ನಟೇಶ್ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇವೆ, ಅವರು ನೀಡಿದ ಮಾಹಿತಿ ಮೇಲೆ ತನಿಖೆ (4ನೇ ಪುಟಕ್ಕೆ)

## ವಕ್ಫ್ ಬಗ್ಗೆ ದಿಕ್ಕು ತಪ್ಪಿಸುವ ಯತ್ನ

### ಬಿಜೆಪಿ ರೈತರ ಜಮೀನುಗಳಿಗೆ ನೋಟಿಸ್ ಕಳಿಸಿರಲಿಲ್ಲ: ಅಶೋಕ್

ಬೆಂಗಳೂರು, ನ. 25 - ವಕ್ಫ್ ವಿಚಾರದಲ್ಲಿ ದಿನಕ್ಕೊಂದು ನಾಟಕ, ಕ್ಷಣಕ್ಕೊಂದು ಸುಳ್ಳು ಹೇಳುತ್ತಲೇ ಬರುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಈಗ ಮತ್ತೊಮ್ಮೆ ಜನರ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದೆ ಎಂದು ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ವಕ್ಫ್ ವಿಚಾರ ಮೊದಲು ಪ್ರಸ್ತಾಪವಾದಾಗ ಸರ್ಕಾರ ಯಾರಿಗೂ ನೋಟಿಸ್ ಕಳುಹಿಸುತ್ತಿಲ್ಲ ಎಂದು ಸುಳ್ಳು ಹೇಳಿದಿರಿ. ನಂತರ ವಿಜಯಪುರ ಜಿಲ್ಲೆಯಲ್ಲಿ ರೈತರು ಸಿಡಿದೆದ್ದಾಗ, ನೋಟಿಸ್ ವಾಪಸ್ಸು ಪಡೆದು, ಈ ಪ್ರಕ್ರಿಯೆ ನಿಲ್ಲಿಸುತ್ತೇವೆ ಎಂದು ಮತ್ತೊಂದು ಸುಳ್ಳು ಹೇಳಿದಿರಿ ಎಂದು ಆರೋಪಿಸಿದ್ದಾರೆ.

ಆದರೆ ರೈತರಿಗೆ, ಮಠ-ಮಂದಿರಗಳಿಗೆ ನೋಟಿಸ್ ಕಳುಹಿಸುವುದು, ರಾತ್ರೋರಾತ್ರಿ (4ನೇ ಪುಟಕ್ಕೆ)

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ





॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

ಶ್ರೀ ಸಿ. ರಾಜಕುಮಾರ ರೆಡ್ಡಿ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.

ದಿನಾಂಕ : 08.11.2024 ರಂದು ಶುಕ್ರವಾರ ರಾತ್ರಿ 7.50ಕ್ಕೆ

ನಮ್ಮ ಪೂಜ್ಯ ತಂದೆಯವರಾದ ಶ್ರೀ ಸಿ. ಹಾಲಪ್ಪ ರೆಡ್ಡಿರವರು

ದಿನಾಂಕ : 16.11.2024ನೇ ಶನಿವಾರ ಮಧ್ಯಾಹ್ನ 12.54ಕ್ಕೆ

ನಮ್ಮ ಪೂಜ್ಯ ತಾಯಿಯವರಾದ ಶ್ರೀಮತಿ ಸಿ. ಯಲ್ಲಮ್ಮನವರು

ವೈಕುಂಠ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಈರ್ವರ

'ವೈಕುಂಠ ಸಮಾರಾಧನೆ'ಯನ್ನು

ದಿನಾಂಕ : 26-11-2024ನೇ ಮಂಗಳವಾರ ಮಧ್ಯಾಹ್ನ 12.00 ಗಂಟೆಗೆ ದಾವಣಗೆರೆಯ 'ಪಂಚವಟಿ ನಿಲಯ', 1ನೇ ಮೇನ್, 3ನೇ ಕ್ರಾಸ್, ವಿದ್ಯಾನಗರ, ವಿನಾಯಕ ಬಡಾವಣೆ ನಮ್ಮ ಸ್ವಗೃಹದಲ್ಲಿ ಇಟ್ಟುಕೊಂಡಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ಮೊ:94484 22866

ಇಂತಿ ದುಃಖತಪ್ತರು :

ಮೃತರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

## ಅಕ್ರಮ ಪಡಿತರ : ತಡೆಯಲು ಹೊರಟಿದ್ದ ಕೌನ್ಸಿಲರ್ ಮೇಲೆ ಹಲ್ಲೆ

**ಹರಿಹರ**

ಹರಿಹರ, ನ.25- ಅಕ್ರಮ ಪಡಿತರ ಅಕ್ಕಿ ಹಾಗೂ ರಾಗಿ ಸಾಗಣೆ ತಡೆಯಲು ಹೋಗಿದ್ದ ನಗರಸಭೆ ಬಿಜೆಪಿ ಸದಸ್ಯ ಹನುಮಂತಪ್ಪನವರ ಮೇಲೆ ಸೊಸೈಟಿ ಮಾಲೀಕ ಡಿ. ಹನುಮಂತಪ್ಪ ಮತ್ತು ಅವರ ಪತ್ನಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ನಗರ ಬಿಜೆಪಿ ಪಕ್ಷದ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಲಾಯಿತು.

ಈ ವೇಳೆ ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಗಟ್ಟೆ ಲಿಂಗರಾಜ್ ಮಾತನಾಡಿ, ಗೂಂಡಾ ವರ್ತನೆ ತೋರಿರುವ ಸೊಸೈಟಿ ಮಾಲೀಕರ ವಿರುದ್ಧ ಕಾನೂನು ರೀತಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿ (2ನೇ ಪುಟಕ್ಕೆ)

## ಚುನಾವಣೆ : ಷೇರುಪೇಟೆಯಲ್ಲಿ ಜಿಗಿತ

ಮುಂಬೈ, ನ. 25 – ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಷೇರುಪೇಟೆಯಲ್ಲಿ ಏರಿಕೆ ಕಂಡು ಬಂದಿದೆ. ಬಿ.ಎಸ್.ಇ. ಸೂಚ್ಯಂಕ 992.74 ಅಂಕ (ಶೇ.1.25)ರಷ್ಟು ಹೆಚ್ಚಾಗಿ 80,109.85ಕ್ಕೆ ತಲುಪಿದೆ. ಎನ್.ಎಸ್.ಇ. ನಿಫ್ಟಿ 314.65 (ಶೇ.1.32) ರಷ್ಟು ಹೆಚ್ಚಾಗಿ 24,221.90ಕ್ಕೆ ತಲುಪಿದೆ.

ಲಾರ್ಸೆನ್ ಅಂಡ್ ಟರ್ಬೊ, ಎಸ್.ಬಿ.ಐ., ಅದಾನಿ ಪೋರ್ಟ್ಸ್, ರಿಲೈಯನ್ಸ್ ಇಂಡಸ್ಟ್ರೀಸ್, ಪವರ್ ಗ್ರಿಡ್, ಐ.ಸಿ.ಐ.ಸಿ.ಐ. ಬ್ಯಾಂಕ್, ಹೆಚ್.ಡಿ.ಎಫ್.ಸಿ. ಬ್ಯಾಂಕ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಕೋಟಕ್ ಮಹೀಂದ್ರ ಬ್ಯಾಂಕ್ ಹಾಗೂ ಆಕ್ಸಿಸ್ ಬ್ಯಾಂಕ್ ಷೇರುಗಳ ಮೌಲ್ಯ ಹೆಚ್ಚಾಗಿದೆ.

## ನೈಸರ್ಗಿಕ ಕೃಷಿಗೆ 2,481 ಕೋಟಿ

**ಕೇಂದ್ರದ ಸಂಪುಟ ಸಭೆಯಲ್ಲಿ ನಿರ್ಧಾರ**

ನವದೆಹಲಿ, ನ. 25 – ಮುಂದಿನ ಎರಡು ವರ್ಷಗಳಲ್ಲಿ 7.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಒಂದು ಕೋಟಿ ರೈತರು ನೈಸ ರ್ಗಿಕ ಕೃಷಿ ನಡೆಸಲು ಉತ್ತೇಜನ ನೀಡುವ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನಕ್ಕೆ 2,481 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಯೋಜನೆ ಬಯಸುವ 15 ಸಾವಿರ ಪಂಚಾಯತ್ ಕ್ಲಸ್ಟರ್‌ಗಳನ್ನು ರೂಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ. ಪ್ರಸಕ್ತ ದೇಶದಲ್ಲಿ 10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೈಸರ್ಗಿಕ ಕೃಷಿ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.


ಅಟಲ್ ಇನ್ನೋವೇಷನ್ ಮಿಷನ್ ಯೋಜನೆಯನ್ನು 2028ರವರೆಗೆ ಮುಂದುವರೆಸಲು 2,750 ಕೋಟಿ ರೂ. ಒದಗಿಸಲೂ ಸಹ ಸಂಪುಟ ನಿರ್ಧರಿಸಿದೆ. ಇದರಿಂದ ಆವಿಷ್ಕಾರ ಹಾಗೂ ಉದ್ಯಮಶೀಲತೆಗೆ ಉತ್ತೇಜನ ಸಿಗಲಿದೆ.

ದೇಶಾದ್ಯಂತ ಸಂಶೋಧನಾ ಪ್ರಬಂಧಗಳು ಹಾಗೂ ನಿಯತಕಾಲಿಕಗಳು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಷನ್ ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕಾಗಿ ಮೂರು ವರ್ಷಗಳ ಅವಧಿಗೆ 6 ಸಾವಿರ ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಈ ಕ್ರಮ ಗುಣಮಟ್ಟದ ಉನ್ನತ ಶಿಕ್ಷಣವನ್ನು ಯುವ ಪೀಳಿಗೆಗೆ ಒದಗಿಸಲು ನೆರವಾಗಲಿದೆ. ಈ ಯೋಜನೆಯಿಂದ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಸಂಶೋಧನಾ ಸಂಸ್ಥೆಗಳು ಒಂದೇ ಮಾಹಿತಿ ಜಾಲಕ್ಕೆ ಒಳಪಡಲಿವೆ. 6,300 ಶಿಕ್ಷಣ ಸಂಸ್ಥೆಗಳು ಹಾಗೂ 1.8 ಕೋಟಿ ವಿದ್ಯಾರ್ಥಿಗಳು, ಬೋಧಕರು ಹಾಗೂ ಸಂಶೋಧಕರು ಒಂದೇ ಜಾಲದಡಿ ಬರಲಿದ್ದಾರೆ.

ಪ್ಯಾನ್ ಸಂಖ್ಯೆಯನ್ನು ಸರ್ಕಾರಿ ಸಂಸ್ಥೆಗಳ ಎಲ್ಲಾ ಡಿಜಿಟಲ್ ವ್ಯವಸ್ಥೆಗಳಲ್ಲಿ ಸಾಮಾನ್ಯ ಗುರುತಿನ ಸಂಖ್ಯೆ ಮಾಡುವ ಪ್ಯಾನ್ 2.0 ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಇದರ ವೆಚ್ಚ 1,436 ಕೋಟಿ ರೂ. ಆಗಿರಲಿದೆ.

## ಶಾಮನೂರು ಹಿಮಂತರಾಜ್‌ರವರ ಕೈಲಾಸ ಶಿವಗಣಾರಾಧನೆ ಆಹ್ವಾನ



ದಿ॥ ಹೆಚ್. ಹಿಮಂತರಾಜು, ಶಾಮನೂರು
ಮಾಜಿ ನಗರಸಭಾ ಸದಸ್ಯರು, ದಾವಣಗೆರೆ

॥ ಶ್ರೀ ಹರಿಹರ ಲಿಂಗೇಶ್ವರ ಪ್ರಸನ್ನ ॥

ಕಕ್ಕರಗೊಳ್ಳದ ದಿ. ಶ್ರೀಮತಿ ಚನ್ನಬಸಮ್ಮ ದಿ. ಶ್ರೀ ಭರಮಪ್ಪ ಇವರ ಪುತ್ರ
ದಾವಣಗೆರೆ ಸಿಟಿ ಶಾಮನೂರು ವಾಸಿ

ದಿ. ಕಕ್ಕರಗೊಳ್ಳದ ಶ್ರೀ ಕೆ.ಹೆಚ್. ಹಿಮಂತರಾಜು
(ಮಾಜಿ ನಗರ ಸಭಾ ಸದಸ್ಯರು, ದಾವಣಗೆರೆ) ಇವರ ಧರ್ಮಪತ್ನಿ

ಶ್ರೀಮತಿ ಕೆ.ಹೆಚ್, ಸಾವಿತ್ರಮ್ಮ
ಮಾಡುವ ವಿಜ್ಞಾಪನೆಗಳು.

ದಿನಾಂಕ : 18.11.2024ನೇ ಸೋಮವಾರ ಬೆಳಿಗ್ಗೆ 8.30 ಗಂಟೆಗೆ ನನ್ನ ಪೂಜ್ಯ ಪತಿಯವರಾದ

ಕಕ್ಕರಗೊಳ್ಳದ ಶ್ರೀ ಹೆಚ್. ಹಿಮಂತರಾಜು
(ಮಾಜಿ ನಗರ ಸಭಾ ಸದಸ್ಯರು, ದಾವಣಗೆರೆ)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಶಿವಗಣಾರಾಧನೆ"ಯನ್ನು

ದಿನಾಂಕ : 26.11.2024 ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ
ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು

ಇಲ್ಲಿ ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ದಿ. ಕಕ್ಕರಗೊಳ್ಳದ ಶ್ರೀ ಕೆ.ಹೆಚ್. ಹಿಮಂತರಾಜು ಇವರ ಧರ್ಮಪತ್ನಿ
ಶ್ರೀಮತಿ ಕೆ.ಹೆಚ್. ಸಾವಿತ್ರಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು.
ಶ್ರೀಮತಿ ಶಾರದಮ್ಮ, ದಿ. ಶ್ರೀ ರಾಜಪ್ಪ ಮತ್ತು ಮಕ್ಕಳು, ಮೃತರ ಸಹೋದರಿಯರು ಮತ್ತು ಮಕ್ಕಳು
ಹರಿಯಪ್ಪ ವಂಶಸ್ಥರು, ಕಕ್ಕರಗೊಳ್ಳ, ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ತಾವುಗಳು ಇಂದಿನ ಕೈಲಾಸ ಶಿವಗಣಾರಾಧನೆ ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.

# ಜಗಳೂರಿನಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ನಿವೇಶನ ನಿಗದಿ



ಜಗಳೂರು, ನ.25- ಬೆಳಗಾವಿ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿ 1924ನೇ ಇಸ್ವಿ ಡಿ.25 ರಂದು ಎಐಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಸವಿನೆನಪಿಗಾಗಿ ರಾಜ್ಯಾದ್ಯಂತ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ 100 ಗಾಂಧಿ ಭವನಗಳನ್ನು ನಿರ್ಮಿಸಲಾಗುವುದು. ಈ ಹಿನ್ನೆಲೆಯಲ್ಲಿ ಪಟ್ಟಣದ ಬೃಂದಾವನ ಲೇಔಟ್ ನಲ್ಲಿ ನಿವೇಶನ ಗುರುತಿಸಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಜನಸಂಪರ್ಕ ಕಚೇರಿಯಲ್ಲಿ ಶಾಸಕ ಬಿ.ದೇವೇಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಹೊರತುಪಡಿಸಿದರೆ 6 ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಕಚೇರಿಗಳಿಲ್ಲ. ಆದ್ದರಿಂದ ಹೊನ್ನಾಳಿ, ಚನ್ನಗಿರಿ, ಜಗಳೂರು ತಾಲ್ಲೂಕುಗಳಲ್ಲಿ ನಿವೇಶನ ನಿಗದಿಯಾಗಿವೆ. ದಾವಣಗೆರೆ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಗಾಂಧಿಭವನ ನಿರ್ಮಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ, ವರಿಷ್ಠರು ನನ್ನನ್ನು ಉಸ್ತುವಾರಿಯನ್ನಾಗಿ ನೇಮಿಸಿದ್ದಾರೆ ಎಂದರು.

ಡಿ.25ರಂದು ಬೆಳಗಾವಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ವರಿಷ್ಠರು ನೂರು ಗಾಂಧಿ ಭವನಗಳ ಶಂಕುಸ್ಥಾಪನೆಗೆ ಚಾಲನೆ ನೀಡಲಿದ್ದಾರೆ. ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಗಾಂಧಿ ಟ್ರಸ್ಟ್ ಗಳ ಮೂಲಕ ಹಣ ವಿನಿಯೋಗಿಸಿ ಸುಸಜ್ಜಿತ ಕಟ್ಟಡ ಹಾಗೂ ಆಯಾ ಸ್ಥಳೀಯ ನಗರಾಡಳಿತ ಸಂಸ್ಥೆಯಿಂದ ಸಿಎ ನಿವೇಶನ ಖರೀದಿಸಲಾಗುವುದು. ಇದಕ್ಕೆ ಸ್ಥಳೀಯ ಶಾಸಕರು ಸಹಕರಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಜಗಳೂರಿನಲ್ಲಿ ಗಾಂಧಿಭವನ ನಿರ್ಮಾಣಕ್ಕೆ ನಿವೇಶನ ನಿಗದಿಪಡಿಸಿದ್ದು, ಭವನ ನಿರ್ಮಾಣ ಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎ.ಎಲ್. ತಿಪ್ಪೇಸ್ವಾಮಿ, ದಾವಣಗೆರೆ ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯ ದ್ಯಾಮಣ್ಣ, ಮುಖಂಡರಾದ ಹೊನ್ನಮರಡಿ ಕೃಷ್ಣಪ್ಪ, ತಿಪ್ಪೇಸ್ವಾಮಿ ಗೌಡ, ಚಿತ್ತಪ್ಪ, ಜೀವಣ್ಣ, ಬಿ.ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ ಮುಂತಾದವರು ಇದ್ದರು.

# ಶುಲ್ಕ ಹೆಚ್ಚಳ: ಸರ್ಕಾರದ ನಿರ್ಧಾರ ಖಂಡನೀಯ

ದಾವಣಗೆರೆ, ನ.25- ಪ್ರಸಕ್ತ 2024-25ನೇ ಶೈಕ್ಷಣಿಕ ಸಾಲಿನ ಪಿಜಿ ವೈದ್ಯಕೀಯ ಹಾಗೂ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ಶುಲ್ಕವನ್ನು ಹೆಚ್ಚಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎಐಡಿಎಸ್‌ಓ ಖಂಡಿಸಿದೆ.

ಖಾಸಗಿ ವೈದ್ಯಕೀಯ ಲಾಬಿಗೆ ಸಂಪೂರ್ಣವಾಗಿ ಶರಣಾಗಿರುವ ರಾಜ್ಯ ಸರ್ಕಾರ ಪ್ರತಿ ವರ್ಷ ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣದ ಶುಲ್ಕವನ್ನು ಏರಿಸುತ್ತಲೇ ಬಂದಿದೆ.

ಖಾಸಗಿ ಕಾಲೇಜುಗಳಲ್ಲಿರುವ ಸರ್ಕಾರಿ ಕೋಟಾದ ಶುಲ್ಕವನ್ನು 1 ಲಕ್ಷ ರೂ.ಗಳಷ್ಟು ಹೆಚ್ಚಿಸಿರುವುದು, ಸರ್ಕಾರದ ವ್ಯಾಪಾರಿ ಧೋರಣೆಯನ್ನು ತೋರಿಸುತ್ತಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಕ್ಕಳಿಗೆ ವೈದ್ಯಕೀಯ ಪಿಜಿ ವ್ಯಾಸಂಗ ಮತ್ತಷ್ಟು ದುಬಾರಿ ಆಗಿರುವುದನ್ನು ಎಐಡಿಎಸ್‌ಓ ರಾಜ್ಯ ಸಮಿತಿ ಖಂಡಿಸುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ತಿಳಿಸಿದ್ದಾರೆ.

# ಇ-ಟೆಂಡರ್ ಜಾರಿ : ಭತ್ತದ ದರ ಏರಿಕೆ

ದಾವಣಗೆರೆ, ನ.25- ನಗರದ ಎಪಿಎಂಸಿ ಇತಿಹಾಸದಲ್ಲೇ ಪ್ರಥಮ ಬಾರಿಗೆ ಭತ್ತ ಖರೀದಿ ಟೆಂಡರ್ ಇಂದು ಪ್ರಾರಂಭವಾಯಿತು.

ಇಂದು ಇ-ಟೆಂಡರ್ ಖರೀದಿಯಲ್ಲಿ ದರ ಹೆಚ್ಚಳವಾಗಿದ್ದು, ಶ್ರೀ ದಾನಮ್ಮ ದೇವಿ ಟ್ರೇಡರ್ಸ್ ದಲಾಲಿ ಮಂಡಿಯಲ್ಲಿ ಮಾಕನೂರು ಮುನಿಯಪ್ಪ ಅಂಡ್ ಸನ್ಸ್ ಎಂಬ ಖರೀದಿದಾರರು ಆರ್.ಎನ್.ಆರ್. ತಳಿಯ ಭತ್ತಕ್ಕೆ ಕ್ವಿಂಟಾಲ್ ಒಂದಕ್ಕೆ ರೂ.2510.00 ದರ ನಮೂದು ಮಾಡಿದ್ದಾರೆ. ಇದು ಇತ್ತೀಚಿನ ದಿನಗಳಲ್ಲಿ ಭತ್ತಕ್ಕೆ ಸಿಕ್ಕ ಅತಿ ಹೆಚ್ಚು ದರವಾಗಿದೆ.

ಮೊನ್ನೆ ಶನಿವಾರ ರೂ. 2400.00 ಆಸುಪಾಸಿನಲ್ಲಿ ಧಾರಣೆ ನಡೆದಿತ್ತು. ಅರವಿಂದ್ ಅಂಡ್ ಕೋ ದಲಾಲಿ ಮಂಡಿಯಲ್ಲಿ ಶ್ರೀ ಉತ್ಸವಾಂಬ ರೈಸ್ ಮಿಲ್‌ನವರು ರೂ.2500.00 ದರ ನಮೂದು ಮಾಡಿದ್ದು, ಇದು 2ನೇ ಅತಿ ಹೆಚ್ಚು ದರವಾಗಿದೆ. ಇದರಿಂದ ಭತ್ತದ ದರ ಕುಸಿತದಿಂದಾಗಿ ಕಂಗಾಲಾಗಿದ್ದ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಇಂದು ದಾವಣಗೆರೆ ಎಪಿಎಂಸಿಗೆ 9342 ಕ್ವಿಂಟಲ್ ಭತ್ತ ಅವಕವಾಗಿದೆ. ಇದರಲ್ಲಿ 8054 ಕ್ವಿಂಟಲ್ ಖರೀದಿಯಾಗಿದೆ. ಇಂದು ಮಾರುಕಟ್ಟೆಗೆ 8234 ಕ್ವಿಂಟಲ್ ಮೆಕ್ಕೆಜೋಳ ಅವಕವಾಗಿದೆ. ಇದರಲ್ಲಿ 8130 ಕ್ವಿಂಟಲ್ ಮಾರಾಟವಾಗಿದೆ. ರೂ. 2341.00 ಅತಿ ಹೆಚ್ಚು ದರವಾಗಿದೆ.

# ಬೆಳ್ಳೂಡಿಯ ಕಾಳಿ ಟಗರು ಇನ್ನಿಲ್ಲ



ಮಲೇಬೆನ್ನೂರು, ನ.25- ರಾಜ್ಯಾದ್ಯಂತ ಟಗರಿನ ಕಾಳಗದಲ್ಲಿ ಭಾರೀ ಹೆಸರು ಮಾಡಿದ್ದ ಬೆಳ್ಳೂಡಿ ಗ್ರಾಮದ 'ಕಾಳಿ' ಟಗರು ಸೋಮವಾರ ಅನಾರೋಗ್ಯದಿಂದ ಮೃತಪಟ್ಟಿದೆ ಎನ್ನಲಾಗಿದೆ. ಸೋಲನ್ನೇ ಕಾಣದ ಕಾಳಿ ಟಗರು ಇದುವರೆಗೂ ನೂರಾರು ಟಗರಿನ ಕಾಳಗದಲ್ಲಿ ಭಾಗವಹಿಸಿ, ಸಾಕಷ್ಟು ಬಹುಮಾನ ಗೆದ್ದಿದೆ. ಬೆಳ್ಳೂಡಿ ಸೇರಿದಂತೆ ಜಿಲ್ಲೆ ಮತ್ತು ರಾಜ್ಯದ ವಿವಿಧ ಭಾಗಗಳಿಂದ ಅಪಾರ ಜನ ಬೆಳ್ಳೂಡಿಗೆ ಬಂದು ಮೃತ ಕಾಳಿ ಟಗರಿನ ಅಂತಿಮ ದರ್ಶನ ಪಡೆದರು.

# ಮಕ್ಕಳ ಹಕ್ಕುಗಳ ಉಲ್ಲಂಘನೆ ಬೇಡ

## ಜಿಗಳಿ : ಮಕ್ಕಳ ಹಕ್ಕುಗಳ ಜಾಗೃತಿಯಲ್ಲಿ ಶಿಕ್ಷಕ ಮಲ್ಲಿಕಾರ್ಜುನ್ ಮನವಿ



ಮಲೇಬೆನ್ನೂರು, ನ.25- ವಿಶ್ವಸಂಸ್ಥೆ ಮಕ್ಕಳಿಗಾಗಿ ಸಾಕಷ್ಟು ಹಕ್ಕುಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಉಲ್ಲಂಘನೆ ಮಾಡುವ ಹಕ್ಕು ಯಾರಿಗೂ ಇಲ್ಲ ಎಂದು ಜಿಗಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಶಿಕ್ಷಕ ಮಲ್ಲಿಕಾರ್ಜುನ್ ಹೇಳಿದರು.

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾಡಳಿತ, ಜಿ ಪಂ, ಹರಿಹರ ತಾ ಪಂ ಮತ್ತು ಜಿಗಳಿ ಗ್ರಾ ಪಂ ವತಿಯಿಂದ ಮಕ್ಕಳ ಹಕ್ಕುಗಳ ಕುರಿತು ಸುವರ್ಣ ಕರ್ನಾಟಕ ಜನ ಜಾಗೃತಿ ಕಲಾ ತಂಡದಿಂದ ಆಯೋಜಿಸಿದ್ದ ಬೀದಿ ನಾಟಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿಶ್ವ ಸಂಸ್ಥೆಯು ಎಲ್ಲರಿಗೂ ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು ಮತ್ತು ಭಾಗವಹಿಸುವ ಹಕ್ಕುಗಳನ್ನು ಜಾರಿಗೆ ತಂದಿದೆ ಎಂದರು.


ಕಲಾ ತಂಡದ ನಾಯಕ ಜಿ. ಎನ್. ಹೇಮಂತ್, ಜಿಗಳಿ ರಂಗನಾಥ್, ಬಿ. ಎಚ್. ಉಮೇಶ್, ಲಿಂಗರಾಜ್, ಹಂಪಣ್ಣ, ದುರುಗೇಶ್, ಸುಲೋಚನಾ ಇವರು ನಾಟಕ ಮತ್ತು ಹಾಡುಗಳ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿದರು.

# ಹೆಸ್ಕಾಂಗೆ ಅಜ್ಜಂಪೀರ್ ಖಾದ್ರಿ ಅಧ್ಯಕ್ಷ



ಹಾವೇರಿ, ನ. 25 - ಶಿಗ್ಗಾಂವಿ- ಸವಣೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ವಂಚಿತರಾಗಿದ್ದ ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ ಅವರನ್ನು ಹುಬ್ಬಳ್ಳಿ- ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

# ರಾಮಕೃಷ್ಣ ಶಾಲೆಯಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.25- ಇಲ್ಲಿನ ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಈಚೆಗೆ 69ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಈ ವೇಳೆ ಶಾಲೆಯ ಕಾರ್ಯದರ್ಶಿ ವಿಜಯಕುಮಾರ್ ಮಾತನಾಡಿ, ಸಾಹಿತ್ಯ, ಕಲೆ ಹಾಗೂ ಸಾಂಸ್ಕೃತಿಕ ಸೊಬಗಿನಿಂದ ಕನ್ನಡ ನಾಡು ಕಂಗೊಳಿಸುತ್ತಿದ್ದು, ಇದಕ್ಕೂ ಮಿಗಿಲಾಗಿ ಸಾಧು, ಸಂತರು ಹಾಗೂ ಶರಣರ ಪಾದ ಸ್ಪರ್ಶ ಈ ಕರುನಾಡಿಗಿರುವುದು ನಮ್ಮೆಲ್ಲರ ಹೆಮ್ಮೆ ಎಂದು ಹೇಳಿದರು.

ಕನ್ನಡಾಂಬೆಯ ವೇಷ ಧರಿಸಿ ಶಾಲಾ ಮಕ್ಕಳು ಎಲ್ಲರನ್ನು ಆಕರ್ಷಿಸಿದರು. ಕೆಲವು ವಿದ್ಯಾರ್ಥಿಗಳು ನಾಡಿನ ವೀರ ನಾಯಕರ ವೇಷದಲ್ಲಿ ನೃತ್ಯ ರೂಪಕ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷ ಕಿರಣ್ ಕುಮಾರ್, ನಿರ್ದೇಶಕಿ ಸಹನ ವಿಜಯ್ ಕುಮಾರ್, ಸ್ನೇಹ ಕಿರಣ್, ಮುಖ್ಯ ಶಿಕ್ಷಕ ಡಿ.ಸಿ. ಸುರೇಶ್, ಶಿಕ್ಷಕರಾದ ಆಶಾ, ಕರಿಬಸಮ್ಮ, ತನುಶ್ರೀ ಹಾಗೂ ಶಾಲಾ ಸಿಬ್ಬಂದಿ ಇದ್ದರು.

# ಹರಿಹರದಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ



ಹರಿಹರ, ನ.25- ಕಾಳಿದಾಸ ವಿದ್ಯಾಸಂಸ್ಥೆ ಆವರಣದಲ್ಲಿ ಶ್ರೀ ಕಾಳಿದಾಸ ಎಜುಕೇಷನಲ್ ಮತ್ತು ಕಲ್ಚರಲ್ ಟ್ರಸ್ಟ್ ಹಾಗೂ ಎಸ್. ಎಸ್. ಕೇರ್ ಟ್ರಸ್ಟ್ ವತಿಯಿಂದ ನಾಳೆ ದಿನಾಂಕ 26 ರ ಮಂಗಳವಾರ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಶ್ರೀ ಕಾಳಿದಾಸ ವಿದ್ಯಾಸಂಸ್ಥೆ ಅಧ್ಯಕ್ಷ ಕೆ.ಬಿ. ರಾಜಶೇಖರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ನಾಳೆ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕಾಳಿದಾಸ ವಿದ್ಯಾ ಸಂಸ್ಥೆಯ ಗೌರವಾಧ್ಯಕ್ಷ ಹಾಗೂ ಮಾಜಿ ಶಾಸಕ ಎಸ್. ರಾಮಪ್ಪ ಉಚಿತ ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಲಿದ್ದಾರೆ.

ಜಿ.ಪಂ. ಮಾಜಿ ಸದಸ್ಯ ಹಾಗೂ ಕಾಳಿದಾಸ ವಿದ್ಯಾಸಂಸ್ಥೆ ಪ್ರಧಾನ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಳಿದಾಸ ವಿದ್ಯಾಸಂಸ್ಥೆ ನಿರ್ದೇಶಕ ಪಾಲಾಕ್ಷಪ್ಪ ಭಾನುವಳ್ಳಿ, ನಾಗರಾಜ್ ಯಕ್ಕೆಗೊಂದಿ, ಶಿವರಾಜ್ ಕೊಕ್ಕನೂರು, ಕಮಲಾಪುರ ಬಿ. ಷಣ್ಮುಖಪ್ಪ, ಕರಿಬಸಪ್ಪ ಬಾವಿಕಟ್ಟಿ, ಮಹೇಶ್ವರಪ್ಪ ದೇವರ ಬೆಳಕೇರಿ, ಟಿ. ರಾಮಚಂದ್ರಪ್ಪ ಕೊಕ್ಕನೂರು, ಪೌಢ ಶಾಲಾ ಮುಖ್ಯ ಶಿಕ್ಷಕ ನಿಜಲಿಂಗಪ್ಪ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಕೃಷ್ಣಮೂರ್ತಿ ಇತರರು ಹಾಜರಿದ್ದರು.

# ಅಕ್ರಮ ಪಡಿತರ ಸಾಗಾಣಿಕೆ : ಕೌನ್ಸಿಲ್‌ರ ಮೇಲೆ ಹಲ್ಲೆ



(1ನೇ ಪುಟದಿಂದ) ದರು. ಮನವಿ ಸ್ವೀಕರಿಸಿದ ತಹಶೀಲ್ದಾರ್ ಗುರು ಬಸವರಾಜ್, ಈ ಬಗ್ಗೆ ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳ ಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಆಟೋ ಹನುಮಂತಪ್ಪ, ಆಟೋ ಚಾಲಕರ ಸಂಘದ ಗೌರವಾಧ್ಯಕ್ಷ ಸಿದ್ದಲಿಂಗ ಸ್ವಾಮಿ, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹೆಚ್. ಮಂಜಾನಾಯ್ಕ್, ಮುಖಂಡರಾದ ಬಾತಿ ಚಂದ್ರಶೇಖರ್, ರಾಜು ರೋಖಡೆ, ಸ್ವಾತಿ ಹನುಮಂತಪ್ಪ, ಜಡಿಯಪ್ಪ, ರಾಜು ಕಿರೋಜಿ, ಸಂತೋಷಿ ಗುಡಿಮನಿ, ಭರತ್, ಗಣೇಶ, ಅನಿಲ್ ಸಾವಂತ್, ಶಾಂತಕುಮಾರ, ಆದಿತ್ಯ, ಯೋಗೀಶ್, ವಿನಾಯಕ ಆರಾಧ್ಯಮಠ ಇತರರು ಹಾಜರಿದ್ದರು.





ರಾಜ್ಯದ ಎಲ್ಲಾ ಮಠಾಧೀಶರ ಭಕ್ತಿಯುಳ್ಳವರು, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರ ಹಾಗೂ ಸಮಾಜ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ನನ್ನ ರಾಜಕೀಯ ಗುರುಗಳು, ನನ್ನ ಮಾರ್ಗದರ್ಶಕರು, ದೀನ-ದಲಿತರ ಆಶಾಕಿರಣ, ಬಡವರ ಬಂಧು, ದಾವಣಗೆರೆ ಜಿಲ್ಲೆಯನ್ನು ಅಭಿವೃದ್ಧಿಪಥದತ್ತ ಮುನ್ನಡೆಸಿರುವ ಮಹಾನ್ ನಾಯಕ, ರೈತರ ಬಗ್ಗೆ ಅಪಾರ ಕಾಳಜಿಯುಳ್ಳವರು, ಮಾಜಿ ಸಚಿವರೂ ಆದ

**ಶ್ರೀ ಎಸ್.ಎ. ರವೀಂದ್ರನಾಥ್ (ರವಿಮಾಮ)**

ಅವರಿಗೆ 79ನೇ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**ಶಾಮನೂರು ಕಲ್ಲೇಶ್ ಜಿ.ಆರ್.**

ರಾಷ್ಟ್ರೀಯ ಹಾಗೂ ರಾಜ್ಯ ನಾಯಕರುಗಳ ನಿರೀಕ್ಷೆಯಲ್ಲಿರುವ ರಾಜ್ಯಸಭೆಗೆ ನಾಮನಿರ್ದೇಶನದ ಪ್ರಬಲ ಆಕಾಂಕ್ಷಿ

ಮೊ. 87229 99997, 87225 55557

ಶಾಮನೂರು ಕಲ್ಲೇಶ್ ಜಿ.ಆರ್. ಅಭಿಮಾನಿ ಬಳಗ


# ಸಂಸ್ಥೆ ಮುನ್ನಡೆಸುವಷ್ಟು ನಗದು, ಲಾಭವಿದೆ : ಅದಾನಿ ಸಮೂಹ

ನವದೆಹಲಿ, ನ. 25 – ತನ್ನ ಬಳಿ ಇರುವ ನಗದು ಹಾಗೂ ಲಾಭಗಳು ಸಾಕಷ್ಟಿದ್ದು, ಸಂಸ್ಥೆಯನ್ನು ಮುನ್ನಡೆಸಲು ಸಾಧ್ಯವಾಗಲಿದೆ ಎಂದು ಉದ್ಯಮಿ ಗೌತಮ್ ಅದಾನಿ ಅವರ ಸಮೂಹ ತಿಳಿಸಿದೆ. ಅಮೆರಿಕದಲ್ಲಿ ಅದಾನಿ ವಿರುದ್ಧ ದೋಷಾರೋಪ ಮಾಡಿರುವ ಹಿನ್ನೆಲೆಯಲ್ಲಿ ಈ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ತನ್ನ ಬಳಿ 55,024 ಕೋಟಿ ರೂ.ಗಳ ನಗದು ಶಿಲ್ಕು ಇದೆ. ಇದು ಮುಂದಿನ 29 ತಿಂಗಳಲ್ಲಿ ಮರು ಪಾವತಿಸಬೇಕಾದ ಸಾಲಕ್ಕಿಂತ ಹೆಚ್ಚಾಗಿದೆ ಎಂದು ಅದಾನಿ ಸಮೂಹ ತಿಳಿಸಿದೆ.

ಕಳೆದ ಆರು ತಿಂಗಳಲ್ಲಿ 75,227 ಕೋಟಿ ರೂ.ಗಳ ಹೂಡಿಕೆ ಮಾಡಲಾಗಿದೆ. ಈ ಅಧಿಯಲ್ಲಿ ಸಾಲದ ಪ್ರಮಾಣ ಕೇವಲ 16,882 ಕೋಟಿ ರೂ. ಹೆಚ್ಚಾಗಿದೆ ಎಂದು ಸಂಸ್ಥೆ ರೂಪಿಸಿರುವ ಟಿಪ್ಪಣಿಯನ್ನು ಹೂಡಿಕೆದಾರರಿಗೆ ನೀಡಲಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ 8 ಲಕ್ಷ ಕೋಟಿ ರೂ.ಗಳ ಹೂಡಿಕೆ ಮಾಡುವ ಗುರಿ ಇದೆ ಎಂದು ಅದಾನಿ ಸಮೂಹ ಈ ಹಿಂದೆ ತಿಳಿಸಿತ್ತು.

# ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್ ಸರ್ಕಲ್ ನಿಟುವಳ್ಳಿ ಹೊಸ ಬಡಾವಣೆ, ಸಾಯಿ ಗಾರ್ಮೆಂಟ್ಸ್ ಹಾಲೋಳ ಬಿಲ್ಡಿಂಗ್ ಹಾಗೂ ಸುತ್ತ ಮುತ್ತಲಿನ ಪ್ರದೇಶ ಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹರಳಹಳ್ಳಿ : ಜಗಜೀವನ್‌ರಾಮ್ ಭವನ ನಿರ್ಮಾಣಕ್ಕೆ ಚಾಲನೆ



ಮಲೇಬೆನ್ನೂರು, ನ.25- ಹರಳಹಳ್ಳಿ ಗ್ರಾಮದಲ್ಲಿ ಶಾಸಕ ಬಿ.ಪಿ. ಹರೀಶ್ ಅವರ ಶಿಫಾರಸ್ಸಿನ ಮೇರೆಗೆ ಗ್ರಾ.ಪಂ. ವತಿಯಿಂದ ಡಾ. ಬಾಬು ಜಗಜೀವನ್‌ರಾಮ್ ಭವನ ನಿರ್ಮಾಣಕ್ಕೆ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಲಾಯಿತು.

ಗ್ರಾ.ಪಂ. ಅಧ್ಯಕ್ಷ ಹೆಚ್. ಎಂ. ಹನುಮಂತಪ್ಪ, ಕೆಆರ್‌ಐಡಿಎಲ್ ಎಇಇ ಶಂಕರನಾಯ್ಕ, ದಲಿತ ಮುಖಂಡ ಡಿ. ಹನುಮಂತಪ್ಪ, ಗ್ರಾಪಂ. ಸದಸ್ಯರಾದ ಪಿ.ಟಿ. ಪಕ್ಕೀರಪ್ಪ, ಚಂದ್ರಶೇಖರಚಾರಿ, ಶ್ರೀಮತಿ ಅನುಷ ನಾಗರಾಜ್, ಶ್ರೀಮತಿ ದೇವಕಿ, ರೂಪ, ಮೈತ್ರಮ್ಮ, ಮಂಜುನಾಥ್, ಚಿಕ್ಕಪ್ಪ, ಮಾಜಿ ಸದಸ್ಯರಾದ ಸಿ.ಕೆ. ರಮೇಶ್, ಗಿಡ್ಡಪ್ಪ ಶೇಖರಪ್ಪ, ಗ್ರಾಮದ ಮುಖಂಡರಾದ ಅಗಸರ ನಿಂಗಪ್ಪ, ಗಿಡ್ಡಪ್ಪ ಉಮೇಶ್, ಕೆ.ಓ. ಕುಮಾರ್, ಕೆ. ಕುಮಾರ್, ಶ್ರೀನಿವಾಸ್, ಚಂದ್ರ, ಮಂಜುನಾಥ್, ತಿಪ್ಪೇಶಿ, ಪಿಡಿಓ ಶಾಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಬಿಳಿಚೋಡು ಗ್ರಾಮದಲ್ಲಿ ನಾಳೆ ಆರೋಗ್ಯ ತಪಾಸಣೆ

ಜಗಳೂರು, ನ. 25 - ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಪ್ರೀತಿ ಆರೈಕೆ ಟ್ರಸ್ಟ್ ವತಿಯಿಂದ ಡಾ. ರವಿಕುಮಾರ್ ಟಿ.ಜಿ. ನೇತೃತ್ವದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಬಿಳಚೋಡು ಗ್ರಾಮದ ಆರೈಕೆ ಕ್ಲಿನಿಕ್ ಮತ್ತು ಗುತ್ತಿ ಮೆಡಿಕಲ್ಸ್‌ನಲ್ಲಿ ನಾಡಿದ್ದು ದಿನಾಂಕ 27 ರ ಬುಧವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಏರ್ಪಡಿಸಲಾಗಿದೆ.

ಹೃದಯರೋಗ, ನರರೋಗ, ಮೂತ್ರಪಿಂಡ, ಕ್ಯಾನ್ಸರ್, ಕೀಲು, ಮೂಳೆ ಮತ್ತು ಸ್ತ್ರಿ ರೋಗ, ಕಿಡ್ನಿ ಸ್ಟೋನ್, ಬಿ.ಪಿ., ಶುಗರ್ ಕಾಯಿಲೆಗಳಿಗೆ ತಪಾಸಣೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ: 9731793463, 84315 41487, 9164465550.


॥ ಶ್ರೀ ಕೊಡದಗುಡ್ಡದ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ದಿ॥ ಶ್ರೀ ಕೆ.ಸಿ. ಲಕ್ಷ್ಮಣಸಿಂಗ್
ರಾಜ್ಯ ಪ್ರಶಸ್ತಿ ವಿಜೇತರು ಹಾಗೂ ಬಣಜಾರ್ ಎಜುಕೇಷನ್ ಟ್ರಸ್ಟ್, ದಾವಣಗೆರೆ.
ಇವರ ದ್ವಿತೀಯ ಪುತ್ರ

**ಶ್ರೀ ಕೆ.ಎಲ್. ರುದ್ರಮುನಿನಾಯ್ಕ**

ಚಿಗಟೇರಿ ಆಸ್ಪತ್ರೆ ನೌಕರರು (ನಿವೃತ್ತ) ಹಾಗೂ ಬಣಜಾರ್ ಎಜುಕೇಷನ್ ಟ್ರಸ್ಟ್‌ನ ಸದಸ್ಯರು ಇವರು 14.11.2024ನೇ ಗುರುವಾರದಂದು ದೈವಾಧೀನರಾದ ಪ್ರಯುಕ್ತ ತತ್ಸಂಬಂಧವಾಗಿ

**'ಕೈಲಾಸ ಸಮಾರಾಧನೆ'ಯನ್ನು**

ದಿನಾಂಕ : 26.11.2024ನೇ ಮಂಗಳವಾರ ಮಧ್ಯಾಹ್ನ 12.00ಕ್ಕೆ ದಾವಣಗೆರೆ ಸಿಟಿ, ಚೇತನ ಹೋಟೆಲ್ ರಸ್ತೆ, ಪಿ.ಜೆ. ಬಡಾವಣೆಯಲ್ಲಿರುವ ಬಣಜಾರ್ ಎಜುಕೇಷನ್ ಟ್ರಸ್ಟ್‌ನಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಸವಿತಾಬಾಯಿ ಶ್ರೀ ರವಿನಾಯ್ಕ ಕೆ.ಆರ್., ಶ್ರೀ ಅರುಣ್‌ಕುಮಾರ್ ನಾಯ್ಕ ಕೆ.ಆರ್., ಶ್ರೀಮತಿ ಲತಾ ಬಾಯಿ ಶ್ರೀ ಎಂ.ಜಿ. ನಾಯ್ಕ್, ಡಾ॥ ಕೆ.ಎಲ್. ಕೃಷ್ಣಲಾಲ್, ಮೊಮ್ಮಕ್ಕಳು, ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು. ಫೋ. : 98457 45622

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


# ಜಗಳೂರು ; ರಾಗಿ ಯಂತ್ರ ಪಲ್ಟಿ : ಇಬ್ಬರು ರೈತ ಕಾರ್ಮಿಕರ ದುರ್ಮರಣ

ಜಗಳೂರು, ನ.25- ರಾಗಿ ಕಾಳು ಬೇರ್ಪಡಿಸುವ ಯಂತ್ರವಿದ್ದ ವಾಹನ ಪಲ್ಟಿಯಾಗಿ ಇಬ್ಬರು ಮೃತ ಪಟ್ಟ ಘಟನೆ ತಾಲ್ಲೂಕಿನ ರಾಜನಹಟ್ಟಿ ಗ್ರಾಮದ ಬಳಿ ನಡೆದಿದೆ.

ಬಂಗಾರಕ್ಕನಗುಡ್ಡ ಗ್ರಾಮದ ಮಹೇಶ್ (35), ರಾಧಮ್ಮ (30) ರೈತ ಕಾರ್ಮಿಕರು ಭೈರನಾಯಕನಹಳ್ಳಿ (ರಾಜನಹಟ್ಟಿ) ಗ್ರಾಮದ ರೈತರ ಜಮೀನಿನಲ್ಲಿ ರಾಗಿ ಕೊಯ್ಲು ಮುಗಿಸಿಕೊಂಡು ಸಂಜೆ ಸ್ವಗ್ರಾಮಕ್ಕೆ ಮರಳುವಾಗ ಸಂಜೆ 4 ಗಂಟೆ ಸುಮಾರಿನಲ್ಲಿ ಈ ಘಟನೆ ನಡೆದಿದೆ.

# ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ ಇಂದು ಸಂಜೆ 7 ರಿಂದ 9ರವರೆಗೆ ನಡೆಯಲಿದೆ. ಧಾರವಾಡದ ಗುರುಬಸವ ಮಹಾಂತ ಟ್ರಸ್ಟ್ ಅಧ್ಯಕ್ಷ ರಮೇಶ ಶಂಕರಪ್ಪರ ತುಂಬರಗುದ್ದಿ ಅವರು ಚತುರ್ವಿದ ಸಾರಾಯ ಸಂಪದ ವಿಷಯವಾಗಿ ಅನುಭಾವದ ನುಡಿಗಳನ್ನಾಡುವರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಮಂಡ್ಯ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಎಸ್. ಶಿವಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಗೂಗಲ್ ಮೀಟ್ ಜಾಯ್ನಿಂಗ್ ಇನ್ಫೋ ವಿಡಿಯೋ ಕಾಲ್ ಲಿಂಕ್: https://meet.google.com/gud-unmq-rtt

# ಆರ್ಥಿಕ ಸಬಲೀಕರಣಕ್ಕಾಗಿ ಗ್ಯಾರಂಟಿ ಯೋಜನೆ ಅನುಷ್ಠಾನ : ಟಿ.ಬಸವರಾಜ್



ದಾವಣಗೆರೆ, ನ. 25- ಜನರ ಹಣಕಾಸಿನ ತೊಂದರೆಗಳನ್ನು ನಿವಾರಿಸಲು ಗ್ಯಾರಂಟಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ಹೇಳಿದರು.

ನಗರದ ಸರ್ಕಾರಿ ಕಾಲೇಜಿನಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಹಯೋಗದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಯುವನಿಧಿ ಯೋಜನೆಯ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಡಿಪ್ಲೋಮಾ, ಪದವಿ ಪೂರೈಸಿಕೊಂಡು ಉದ್ಯೋಗ ಸಿಗುವವರೆಗೆ ವಿವಿಧ ಸಂದರ್ಶನಗಳಿಗೆ ಹಾಜರಾಗಲು ಯುವನಿಧಿಯಿಂದ ಸಹಕಾರಿಯಾಗಲಿದೆ, ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಉತ್ತಮವಾಗಲಿದೆ ಎಂದು ಅವರು ಹೇಳಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ನಂಜಾನಾಯ್ಕ ಮಾತನಾಡಿ, ವಿದ್ಯಾರ್ಥಿಗಳ ಕುರಿತು ಮೊದಲು ನಾನು ಇದೇ ಕಾಲೇಜಿನಲ್ಲಿ ಸುಮಾರು ಐದು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದೇನೆ. ಇಲ್ಲಿ ಬರುವ ಹಲವಾರು ವಿದ್ಯಾರ್ಥಿಗಳಿಗೆ ಇರುವ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಹಣಕಾಸಿನ ಅವಶ್ಯಕತೆ ತುಂಬಾ ಮುಖ್ಯ, ಹಾಗಾಗಿ ಈ ಯೋಜನೆಯನ್ನು ಎಲ್ಲರೂ ಸಮರ್ಪಕವಾಗಿ ಬಳಸಿಕೊಂಡು ಸಾರ್ಥಕ ಬದುಕು ರೂಪಿಸಿಕೊಳ್ಳಿ ಎಂದು ಕರೆ ನೀಡಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಸಿ. ಬಸವರಾಜ್ ತಹಶೀಲ್ದಾರ್ ಮಾತನಾಡಿದರು.

ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರುಗಳಾದ ಎಸ್.ಎಸ್. ಗಿರೀಶ್, ಹೆಚ್.ಜೆ. ಮೈನುದ್ದಿನ್ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರುಗಳಾದ ವೆಂಕಟೇಶ ಬಾಬು ಮತ್ತು ರಾಜ್ ಮೋಹನ್ ಎನ್.ಆರ್, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಎಸ್. ಮಲ್ಲಿಕಾರ್ಜುನ, ಬಿ.ಎನ್. ಧನಂಜಯ ಉಪಸ್ಥಿತರಿದ್ದರು.

# ಬಹುಭಾಷೆ ಕಲಿಯಿರಿ, ಕನ್ನಡ ಪೋಷಿಸಿರಿ: ಡಾ.ಗೀತಾ



ದಾವಣಗೆರೆ, ನ.25- ಕಲಿಯುಗದ ಸ್ಪರ್ಧಾ ಪ್ರಪಂಚದಲ್ಲಿ ಬಹುಭಾಷೆ ಕಲಿಯಿರಿ, ಆದರೆ ನಮ್ಮ ಮಾತೃಭಾಷೆ ಕನ್ನಡವನ್ನು ಪೋಷಿಸಿರಿ ಎಂದು ಎ.ವಿ.ಕೆ. ಮಹಿಳಾ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ. ಗೀತಾ ಬಸವರಾಜ್ ತಿಳಿಸಿದರು.

ನಗರದ ಬಾಪೂಜಿ ನರ್ಸಿಂಗ್ ಕಾಲೇಜ್ ಹಾಗೂ ಬಾಪೂಜಿ ನರ್ಸಿಂಗ್ ಶಾಲೆಯಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಾವು ನವೆಂಬರ್ ಕನ್ನಡಿಗರಾಗದೇ ನಂಬರ್ ಒನ್ ಕನ್ನಡಿಗರಾಗಬೇಕು ಎಂದು ಕಾಲೇಜಿನ ಕನ್ನಡ ಉಪನ್ಯಾಸಕ ಜೆಂಬಿಗಿ ಮೃತ್ಯುಂಜಯ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು,

ಸಮಾರಂಭದಲ್ಲಿ ಬಾಪೂಜಿ ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ನರ್ಮದಾ ಎ. ಮಾತನಾಡಿದರು, ಸಮಾರಂಭದ ಅಧ್ಯಕ್ಷತೆಯನ್ನು ಬಾಪೂಜಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಹರ್ಷ ಕೆ.ಎಂ. ವಹಿಸಿದ್ದರು

ಕು. ಕೀರ್ತಿ ಪ್ರಾರ್ಥಿಸಿದರು, ಕು. ಮಧು ಮಡಿವಾಳರ ಸ್ವಾಗತಿಸಿದರು. ಕು. ದೀಪ್ತಿ ಶಂ. ದೊಡ್ಡಮನಿ ಹಾಗೂ ದೀಪಿಕಾ ಎಂ. ಕಾರ್ಯಕ್ರಮ ನಿರೂಪಿಸಿದರೆ ಕು. ಶಾಂತ ಮಡಿವಾಳರ ವಂದಿಸಿದರು.







# ವಕ್ಫ್ ಬಗ್ಗೆ ದಿಕ್ಕು ತಪ್ಪಿಸುವ ಯತ್ನ

**(1ನೇ ಪುಟದಿಂದ)** ತರಾತುರಿಯಲ್ಲಿ ಭೂದಾಖಲೆಗಳನ್ನು ತಿದ್ದುವುದು ಮಾತ್ರ ನಿಲ್ಲಲೇ ಇಲ್ಲ ಎಂದು ಆರೋಪಿಸಿದ್ದಾರೆ. ಮೇಲಾಗಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು, ಇದೆಲ್ಲಾ ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ನಡೆಯುತ್ತಿದೆ ಎಂದು ಹೇಳುವ ವಿಡಿಯೋ ಬಹಿರಂಗವಾದ ನಂತರ ತಮ್ಮ ಸುಳ್ಳು ಸಂಪೂರ್ಣ ಬಯಲಾಯಿತು ಎಂದು ಹೇಳಿದ್ದಾರೆ.

ಈಗ ವಕ್ಫ್ ವಿಚಾರದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲೇ ಅತಿಹೆಚ್ಚು ನೋಟಿಸ್‌ಗಳನ್ನು ನೀಡಲಾಗಿದೆ ಎಂದು ಮತ್ತೊಂದು ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದ್ದೀರಿ. ಓಲೈಕೆ ರಾಜಕಾರಣಕ್ಕೆ ಇನ್ನೆಷ್ಟು ಸುಳ್ಳು ಹೇಳುತ್ತೀರಿ? ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಭಾವಿ ಮುಖಂಡರು ಬಡವರಿಗೆ ಸೇರಿದ ಸಾವಿರಾರು ಎಕರೆ ವಕ್ಫ್ ಭೂಮಿ ಕಬಳಿಸಿದ್ದಾರೆ ಎಂಬ ವರದಿ ನಮ್ಮ ಸರ್ಕಾರಕ್ಕೆ ಬಂದಿತ್ತು. ಆಗ ಆ ವರದಿಯ ಆಧಾರದ ಮೇಲೆ ತನಿಖೆ ಮಾಡಲು ಸಂಬಂಧಪಟ್ಟವರಿಗೆ ನೋಟಿಸ್‌ಗಳನ್ನು ನೀಡಲಾಗಿತ್ತೇ ಹೊರತು, ಇದರ ಹಿಂದೆ ಯಾವುದೇ ಕುತಂತ್ರ, ಷಡ್ಯಂತ್ರ ಇರಲಿಲ್ಲ ಎಂದು ಅಶೋಕ್ ಹೇಳಿದ್ದಾರೆ.

ಇಷ್ಟಕ್ಕೂ, ಬಿಜೆಪಿ ಸರ್ಕಾರ ಬಡ ರೈತರು ತಲೆ ತಲಾಂತರಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ಕೃಷಿ ಜಮೀನುಗಳಿಗೆ, ಗೋಮಾಳಗಳಿಗೆ, ಸ್ಮಶಾನಗಳಿಗೆ, ನೂರಾರು ವರ್ಷ ಇತಿಹಾಸ ಇರುವ ಸರ್ಕಾರಿ ಶಾಲೆಗಳಿಗೆ, ದೇವಸ್ಥಾನಗಳಿಗೆ, ಮಠ-ಮಾನ್ಯಗಳಿಗೆ, ಪಾರಂಪರಿಕ ತಾಣಗಳಿಗೆ, ಜನಸಾಮಾನ್ಯರ ಆಸ್ತಿ-ಪಾಸ್ತಿಗಳಿಗೆ, ಮಾಜಿ ಶಾಸಕರ ಮನೆಗಳಿಗೆ ನೋಟಿಸ್ ಕಳುಹಿಸಿಲ್ಲ ಎಂದೂ ಹೇಳಿದ್ದಾರೆ.

ಬಡವರ ಭೂಮಿ ನುಂಗಿರುವ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ಹಿಡಿಯುವ ಉದ್ದೇಶದಿಂದ ನೋಟಿಸ್ ಕೊಟ್ಟಿತ್ತು. ಇಷ್ಟಕ್ಕೂ ಈಗ ತಮ್ಮದೇ ಸರ್ಕಾರ ಇದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೊಟ್ಟ ನೋಟಿಸ್‌ಗಳಲ್ಲಿ ಏನಾದರೂ ತಪ್ಪಿದ್ದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಸವಾಲು ಹಾಕಿದ್ದಾರೆ.

# ಪ್ರೇಮಾಲಯದಲ್ಲಿ ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ

ದಾವಣಗೆರೆ, ನ.25- ವಚನಾಮೃತ ಬಳಗ ಮತ್ತು ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿ, ಜಿಲ್ಲಾ ಮಹಿಳಾ ಘಟಕ ವತಿಯಿಂದ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ, ಚನ್ನಬಸವಣ್ಣನವರ, ನೀಲಾಂಬಿಕೆ ಅವರ ಜಯಂತಿ ಕಾರ್ಯಕ್ರಮವನ್ನು ವನಿತಾ ಸಮಾಜದ ಅಂಗ ಸಂಸ್ಥೆಯಾದ ಪ್ರೇಮಾಲಯದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸೌಮ್ಯ ಸತೀಶ್ ಧಾರವಾಡ ಅವರು ವಚನಾಮೃತ ಬಳಗ ಮತ್ತು ಪುಟರಾಜ ಗವಾಯಿಗಳವರ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಂಗ ಕಲಾವಿದ ಮಲ್ಲೇಶ್ ಮಕ್ಕಳಿಗೆ ಕನ್ನಡ ಭಾಷೆ ಇತಿಹಾಸ ಹಾಗೂ ಉಳಿಸಿ ಬೆಳೆಸಿಕೊಂಡು



ಹೋಗುವ ಬಗ್ಗೆ ತಿಳಿಸಿದರು. ಬಳಗದ ಸದಸ್ಯರಾದ ಪೂರ್ಣಿಮಾ ಬಸವರಾಜ ಮಕ್ಕಳ ದಿನಾಚರಣೆ ಮತ್ತು ಕನ್ನಡ ಭಾಷಾಭಿಮಾನದ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿದರು.

ಪ್ರೇಮಾಲಯದ ಮಕ್ಕಳಿಗೆ ವಚನ ಗಾಯನ ಕನ್ನಡ ಹಾಡುಗಳನ್ನು ಹೇಳಿಕೊಡಲಾಯಿತು. ಕೊನೆಯಲ್ಲಿ ಮಕ್ಕಳಿಗೆ ಸ್ಪರ್ಧೆಗಳನ್ನು ಪ್ರಧಾನ ಕಾರ್ಯದರ್ಶಿಯಾದ ಮಮತಾ ನಾಗರಾಜ್ ಮತ್ತು ಮಧುಮತಿ ಗಿರೀಶ್ ನಡೆಸಿಕೊಟ್ಟು ಮಕ್ಕಳಿಗೆ ಬಹುಮಾನ ವಿತರಿಸಿದರು.

ಶಾಂತ ಶಿವಶಂಕರ್, ದೀಪಾ ಕಿರಣ್, ಲತಾ ಕಪಾಳಿ, ಮಧುಮತಿ ಗಿರೀಶ್, ಸುಜಾತಾ ಬಸವರಾಜ್ ಇವರುಗಳು ಭಾಗವಹಿಸಿದ ಮಕ್ಕಳಿಗೆ ವಚನ ಗಾಯನ ಹೇಳಿಕೊಟ್ಟರು. ಗಿರಿಜಾ ಬಿಲ್ಲಳ್ಳಿ, ಸಾವಿತ್ರಮ್ಮ ವೃದ್ಧಾಶ್ರಮದ ತಾಯಂದಿರು ಮತ್ತು ಪ್ರೇಮಾಲಯದ ಅಧ್ಯಕ್ಷೆ ಶೀಲಾ ನಲ್ಲೂರು ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬಣ ಜಗಳಕ್ಕೆ ಕಾರಣವಾದ ಯತ್ನಾಳ್ ವಕ್ಫ್ ಪ್ರವಾಸ

ಬೆಂಗಳೂರು, ನ. 25 – ವಕ್ಫ್ ಸಮಸ್ಯೆ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ. ಆದರೆ, ಯತ್ನಾಳ್ ವಿರುದ್ಧ ಬಿಜೆಪಿಯಿಂದ ಪೊಲೀಸರಿಗೆ ದೂರು ನೀಡಲಾಗಿದೆ. ಇದರಿಂದಾಗಿ ಬಣ ಜಗಳ ಬೀದಿಗೆ ಬಂದಿದೆ.

ವಕ್ಫ್ ಭೂಕಬಳಿಕೆ ವಿರೋಧಿಸಿ ಬೀದರ್‌ನಿಂದ ಯತ್ನಾಳ್ ಹಾಗೂ ಅವರ ತಂಡ ಪ್ರವಾಸ ಹೊರಟಿದೆ. ಆದರೆ, ಈ ಸಂದರ್ಭದಲ್ಲಿ ಬಿಜೆಪಿ ಚಿಹ್ನೆ ಬಳಸಿರುವುದಕ್ಕೆ ಆಕ್ಷೇಪಿಸಿ ಬೀದರ್ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಯತ್ನಾಳ್ ತಂಡದ ವಕ್ಫ್ ಹೋರಾಟಕ್ಕೆ ಕೇಂದ್ರದ ಬಿಜೆಪಿ ಹಾಗೂ ರಾಜ್ಯದ ಬಿಜೆಪಿಗೆ ಸಂಬಂಧವಿಲ್ಲ. ಇದು ಪಕ್ಷ ವಿರೋಧಿ ನಡೆ, ಪಕ್ಷದ ಶಿಸ್ತು ಉಲ್ಲಂಘನೆ. ಬೀದರ್‌ನಲ್ಲಿ ದೂರು ದಾಖಲಾಗಿರುವುದು ಸರಿಯಿದೆ. ರಾಷ್ಟ್ರೀಯ ಬಿಜೆಪಿಗೂ ಯತ್ನಾಳ್ ತಂಡದ ವಿರುದ್ಧ ವರದಿ ಕಳಿಸಲಾಗುತ್ತದೆ ಎಂದರು

ಇಂದು ಉತ್ತರ ಕರ್ನಾಟಕದ ಬೀದರ್‌ನಿಂದ ದಕ್ಷಿಣ ಕರ್ನಾಟಕದ ಚಾಮರಾಜನಗರದವರೆಗೆ ಒಂದು ತಿಂಗಳ ಕಾಲ ಜನಜಾಗೃತಿ ಅಭಿಯಾನ ಆರಂಭಿಸಿದ್ದು, ಡಿಸೆಂಬರ್ 25 ರಂದು ಬೆಂಗಳೂರಿನಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಯತ್ನಾಳ್ ತಿಳಿಸಿದ್ದಾರೆ.

ಯತ್ನಾಳ್ ನೇತೃತ್ವದ ಪಾಳೆಯದಲ್ಲಿ ಶಾಸಕ ರಮೇಶ ಜಾರಕಿಹೊಳಿ, ಮಾಜಿ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಶಾಸಕ ಕುಮಾರ್ ಬಂಗಾರಪ್ಪ, ಶಾಸಕ ಬಿ.ಪಿ. ಹರೀಶ್ ಸೇರಿದಂತೆ ಬಿಜೆಪಿಯ 12 ಹಿರಿಯ ನಾಯಕರು ಭಾಗವಹಿಸುತ್ತಿದ್ದಾರೆ.

# ಜೆಡಿಎಸ್ ಒಡೆಯಲು ಕಾಂಗ್ರೆಸ್ ಯತ್ನ?

ಬೆಂಗಳೂರು, ನ. 25 - ವಿಧಾನಸಭಾ ಉಪಚುನಾವಣೆ ಫಲಿತಾಂಶ ಹೊರಬೀಳುತ್ತಿದ್ದಂತೆ ಜೆಡಿಎಸ್ಸನ್ನು ಒಡೆಯಲು ಕಾಂಗ್ರೆಸ್ ಮುಂದಾಗಿದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

ಜೆಡಿಎಸ್‌ನ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಹಾಲಿ ಶಾಸಕ ಜಿ.ಟಿ.ದೇವೇಗೌಡರ ನಾಯಕತ್ವದಲ್ಲೇ ಪಕ್ಷ ಮತ್ತು ಶಾಸಕರನ್ನು ಒಡೆಯಲು ವೇದಿಕೆ ಸಿದ್ಧಗೊಂಡಿದೆ ಎನ್ನಲಾಗುತ್ತಿದೆ.

ಬೆಳಗಾವಿ ಅಧಿವೇಶನಕ್ಕೂ ಮುನ್ನವೇ ಪಕ್ಷದ ವಿರುದ್ಧ ತಿರುಗಿಬಿದ್ದು ಸಿದ್ದರಾಮಯ್ಯ ಪರ ನಿಲ್ಲುತ್ತಿರುವ ಈ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ಆದರೆ, ಪ್ರತ್ಯೇಕ ಬಣವಾಗಿ ಗುರುತಿಸಿಕೊಂಡು ತಮ್ಮದೇ ನೈಜ ಜೆಡಿಎಸ್ ಎಂದು ಬಿಂಬಿಸಿಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತೆರೆಮರೆಯಲ್ಲಿ ಜೆಡಿಎಸ್‌ನ ಕೆಲವು ಶಾಸಕರು ಮತ್ತು ಮುಖಂಡರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಜೆಡಿಎಸ್ ಕಾರ್ಯಕರ್ತರನ್ನು ಪಕ್ಷಕ್ಕೆ ಸೆಳೆದುಕೊಳ್ಳುವ ಉದ್ದೇಶದಿಂದಲೇ ಮುಖ್ಯಮಂತ್ರಿಗಳ ಅಭಿಮಾನಿಗಳ ಹೆಸರಿನಲ್ಲಿ ಡಿಸೆಂಬರ್ 5ರಂದು ಹಾಸನದಲ್ಲಿ ಬೃಹತ್ ಸಮಾವೇಶ ನಡೆಸುತ್ತಿದ್ದಾರೆ.

ಇದಕ್ಕೂ ಮುನ್ನ ತುಮಕೂರಿನಲ್ಲಿ ಸರ್ಕಾರದ ವತಿಯಿಂದ ಡಿಸೆಂಬರ್ 2ರಂದು ಸಾಧನಾ ಸಮಾವೇಶವನ್ನು ಮುಖ್ಯಮಂತ್ರಿಯವರೇ ಆಯೋಜಿಸಿದ್ದಾರೆ.

ಗೃಹ ಇಲಾಖೆ ಹೊಣೆ ಹೊತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್, ಸಾಧನಾ ಸಮಾವೇಶ ನಡೆಸಲು ಭಾರೀ ಸಿದ್ಧತೆ ಮಾಡಿಕೊಂಡಿದ್ದಾರೆ.

ಸರ್ಕಾರಿ ಸಮಾವೇಶದಲ್ಲೇ ಜಿ.ಟಿ.ದೇವೇಗೌಡ ಸೇರಿದಂತೆ ಕೆಲವು ಜೆಡಿಎಸ್ ಶಾಸಕರು ವೇದಿಕೆಯನ್ನು ಹಂಚಿಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ.

ಆ ನಂತರ, ಹಾಸನದಲ್ಲಿ ನಡೆಯುವ ಸಮಾವೇಶದಲ್ಲಿ ಮಾಜಿ ಪ್ರಧಾನಿ ದೇವೇಗೌಡರ ವಿರುದ್ಧ ಸಿದ್ದರಾಮಯ್ಯ ಟೀಕಾಸ್ತ್ರಗಳನ್ನು ಸಿಡಿಸಿ, ಕೋಮುವಾದಿ ಪಕ್ಷದ ಜೊತೆ ಜೆಡಿಎಸ್ ಕೈಜೋಡಿಸಿದ್ದು, ಇದನ್ನು ವಿರೋಧಿಸಿ ಆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹೊರಬನ್ನಿ ಎಂದು ಸಾರ್ವಜನಿಕವಾಗಿ ಕರೆ ನೀಡಲಿದ್ದಾರೆ ಎನ್ನಲಾಗುತ್ತಿದೆ.

## ಅದಾನಿ ದೇಣಿಗೆ ಸ್ವೀಕರಿಸದಿರಲು ತೆಲಂಗಾಣ ನಿರ್ಧಾರ

ಹೈದರಾಬಾದ್, ನ. 25 – ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ರಾಜ್ಯ ಸರ್ಕಾರದ ಯಂಗ್ ಇಂಡಿಯಾ ಸ್ಕಿಲ್ ಯುನಿವರ್ಸಿಟಿಗೆ ಘೋಷಿಸಿರುವ 100 ಕೋಟಿ ರೂ. ದೇಣಿಗೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಹೇಳಿದ್ದಾರೆ.

ದೇಣಿಗೆ ನೀಡುವುದಾಗಿ ಅದಾನಿ ಘೋಷಣೆ ಮಾಡಿರುವುದು ಅನಗತ್ಯ ಚರ್ಚೆಗೆ ಕಾರಣವಾಗಿದೆ. ಹೀಗಾಗಿ ದೇಣಿಗೆ ಒಪ್ಪಿಕೊಳ್ಳುವುದಿಲ್ಲ ಎಂದು ರೆಡ್ಡಿ ಹೇಳಿದ್ದಾರೆ.

ಅದಾನಿ ಸಮೂಹ ಸೇರಿದಂತೆ ಯಾವುದೇ ಸಂಘಟನೆಯಿಂದ ತೆಲಂಗಾಣ ಸರ್ಕಾರ ಒಂದೇ ಒಂದು ರೂಪಾಯಿಯನ್ನೂ ಪಡೆದಿಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ.

# ಇಂದು ಹೈಕೋರ್ಟ್‌ಗೆ ಮುಡಾ ವರದಿ

**(1ನೇ ಪುಟದಿಂದ)** ಮುಂದುವರೆದಿದೆ.

ಅಧಿಕಾರಿಯ ವಿಚಾರಣೆಗೆ ಸರ್ಕಾರ ಮೂರು ವಾರ ತಡವಾಗಿ ಅನುಮತಿ ನೀಡಿದ್ದರಿಂದ ತನಿಖೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ, ತನಿಖೆ ಇನ್ನೂ ಪ್ರಗತಿಯಲ್ಲಿದೆ ಎಂದು ಲೋಕಾಯುಕ್ತ ಸದ್ಯದ ಸ್ಥಿತಿ ವರದಿ ನೀಡಲಿದೆ.

ಎಸ್‌ಪಿ ಅವರು, ಲೋಕಾಯುಕ್ತ ಐಜಿ ಸುಬ್ರಹ್ಮಣ್ಯೇಶ್ವರ ರಾವ್ ಅವರನ್ನು ಕೆಲವು ದಿನಗಳ ಹಿಂದೆ ಭೇಟಿ ಮಾಡಿ, ಸದ್ಯದ ಸ್ಥಿತಿಯ ಮಾಹಿತಿ ವರದಿ ನೀಡಿದ್ದರು.

ಈ ವರದಿ ನಂತರ ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಪ್ರಮುಖ ಪಾತ್ರಧಾರರಾಗಿದ್ದ ಮುಡಾದ ಆಯುಕ್ತರನ್ನು ವಿಚಾರಣೆಗೆ ಒಳಪಡಿಸಿದ್ದರು, ಈ ವರದಿಯು ಸೇರಿದಂತೆ ಎಲ್ಲವನ್ನೂ ನ್ಯಾಯಪೀಠದ ಮುಂದೆ ಸಲ್ಲಿಸಲಿದ್ದಾರೆ.

ಎಸ್‌ಪಿ ಅವರು ಐಜಿ ಅವರಿಗೆ ಸಲ್ಲಿಸಿರುವ ವರದಿಯಲ್ಲಿ ಮುಖ್ಯಮಂತ್ರಿ ಮತ್ತು ಅವರ ಕುಟುಂಬದವರ ಪಾತ್ರವಿಲ್ಲ, ಅಧಿಕಾರಿಗಳ ಲೋಪದಿಂದ ನಿವೇಶನಗಳ ಹಂಚಿಕೆ ನಡೆದಿದೆ ಎಂದು ತಿಳಿಸಿದ್ದರು.

ಪ್ರಕರಣ ಸಿಬಿಐಗೆ ವಹಿಸುವ ಸಂಬಂಧದ ಅರ್ಜಿ ನ್ಯಾಯಾಲಯದ ಮುಂದೆ ವಿಚಾರಣೆಗೆ ಬರುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು, ಇಂದು ಮೈಸೂರಿನ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿಗೆ ಪೂಜೆ ಸಲ್ಲಿಸಿದರು.

# ಶಿವಸೇನೆ ಪಟ್ಟು, ಸಿಎಂ ಆಯ್ಕೆ ವಿಳಂಬ

ಮುಂಬೈ, ನ. 25 – ಏಕನಾಥ ಶಿಂಧೆ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು ಎಂದು ಶಿವಸೇನೆ ಪಟ್ಟು ಹಿಡಿದಿರುವ ಕಾರಣದಿಂದಾಗಿ, ಮಹಾರಾಷ್ಟ್ರದ ಮುಂದಿನ ಮುಖ್ಯಮಂತ್ರಿ ಆಯ್ಕೆ ವಿಳಂಬವಾಗಿದೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಮೈತ್ರಿಕೂಟ ಚುನಾವಣೆಯಲ್ಲಿ ಭರ್ಜರಿ ಬಹುಮತ ಗಳಿಸಿದೆ. ಆದರೆ, ಎರಡು ದಿನಗಳಾದರೂ ಮುಖ್ಯಮಂತ್ರಿ ಆಯ್ಕೆ ಅಂತಿಮಗೊಳಿಸಲು ಸಾಧ್ಯವಾಗಿಲ್ಲ.

ಬಿಹಾರ ಮಾದರಿಯಂತೆ ಶಿಂಧೆ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು ಎಂದು ಶಿವಸೇನೆ ವಕ್ತಾರ ನರೇಶ್ ಮಾಸ್ಕೆ ಹೇಳಿದ್ದಾರೆ.

ಆದರೆ, ಫಡ್ನವೀಸ್ ಅವರು ರಾಜ್ಯ ಮುನ್ನಡೆಸಲು ಸಮರ್ಥವಾಗಿದ್ದಾರೆ ಎಂದು ಬಿಜೆಪಿ ಪರಿಷತ್ ಸದಸ್ಯ ಪ್ರವೀಣ್ ದರೇಕರ್ ಹೇಳಿದ್ದಾರೆ.

ಫಡ್ನವೀಸ್ ನೇತೃತ್ವದಲ್ಲಿ ಬಿಜೆಪಿ 132 ಸ್ಥಾನಗಳನ್ನು ಗಳಿಸಿದೆ.

ಬಿಜೆಪಿ ಸ್ವಂತ ಬಲದ ಮೇಲೆ ಬಹುಮತಕ್ಕೆ ಕೇವಲ 12 ಸ್ಥಾನಗಳಷ್ಟು ಹಿಂದಿದೆ. ಶಿವಸೇನೆ 57 ಹಾಗೂ ಎನ್.ಸಿ.ಪಿ. 41 ಸ್ಥಾನಗಳನ್ನು ಹೊಂದಿವೆ.

ಫಡ್ನವೀಸ್ ಮುಖ್ಯಮಂತ್ರಿಯಾಗುವುದನ್ನು ಅಜಿತ್ ಪವಾರ್ ನೇತೃತ್ವದ ಎನ್.ಸಿ.ಪಿ. ಬೆಂಬಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಫಡ್ನವೀಸ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡದೇ ಇದ್ದರೆ, ಕಾರ್ಯಕರ್ತರಲ್ಲಿ ಬೇಸರ ಮೂಡಲಿದೆ ಎಂಬ ಮಾತು ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿದೆ.

# ಅಂಜುಂ ಶಾಲೆಯಲ್ಲಿ ಕನ್ನಡ ಮಾಧ್ಯಮ ಶಿಕ್ಷಕರಿಗೆ ಗುರುವಂದನೆ



ದಾವಣಗೆರೆ, ನ. 25- ಇಲ್ಲಿನ ಭಗತ್ ಸಿಂಗ್ ನಗರದಲ್ಲಿರುವ ಅಂಜುಂ ಶಾಲೆಯಲ್ಲಿ 1987-1997ರ ಬ್ಯಾಚ್‌ನ ವಿದ್ಯಾರ್ಥಿಗಳಿಂದ ಕನ್ನಡ ಮಾಧ್ಯಮ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಹಿರಿಯ ಶಿಕ್ಷಕ ಬಿ.ಎಂ. ಅತಾವುಲ್ಲಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಿಕಾರಿಪುರ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಮಹ್ಮದ್ ರಫೀಕ್ ಖಾನ್, ಶಿಕ್ಷಕರಾದ ಹೆಚ್. ಸೈಫುಲ್ಲಾ, ಶ್ರೀಮತಿ ಎಸ್. ಮೀರಾಂಬಿ ಹಾಗೂ ಎಲ್ಲಾ ಗುರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸನ್ಮಾನಿತರಾದ ಎಲ್ಲಾ ಶಿಕ್ಷಕ ವೃಂದದವರು ಹಳೇ ವಿದ್ಯಾರ್ಥಿಗಳನ್ನು ಕಂಡು ಸಂತೋಷಭರಿತರಾಗಿ ಹಿತ ನುಡಿಗಳನ್ನಾಡಿದರು. ಹಳೇ ವಿದ್ಯಾರ್ಥಿ ಬಸವರಾಜ್ ಸ್ವಾಗತಿಸಿದರು. ಮನ್ಸೂರ್ ಅಲಿ ಕಾರ್ಯಕ್ರಮ ನಿರೂಪಿಸಿದರು. ಆರ್.ಹೆಚ್. ಗಾಯತ್ರಿ ವಂದಿಸಿದರು.

# ಮಹಾರಾಷ್ಟ್ರ : ಲಕ್ಷ ಮತ ಪಡೆದೂ ಸೋತ 58 ಅಭ್ಯರ್ಥಿಗಳು

ಮುಂಬೈ, ನ. 25 – ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ತೀವ್ರ ಸ್ಪರ್ಧೆ ಕಂಡು ಬಂದಿದ್ದು, ಲಕ್ಷಕ್ಕೂ ಹೆಚ್ಚು ಮತಗಳನ್ನು ಪಡೆದರೂ 58 ಅಭ್ಯರ್ಥಿಗಳು ಸೋಲು ಕಂಡಿದ್ದಾರೆ. ಇವರಲ್ಲಿ ಎನ್.ಸಿ.ಪಿ. (ಎಸ್.ಪಿ.) ಅಭ್ಯರ್ಥಿಗಳೇ ಹೆಚ್ಚಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್ ಚವಾಣ್ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಬಾಳಾಸಾಹೇಬ್ ಥೋರಟ್ ಮತ್ತಿತರರು ಸೋತ ಪ್ರಮುಖರಾಗಿದ್ದಾರೆ.

ಎನ್.ಸಿ.ಪಿ.ಯ ಸುನಿಲ್ ಟಿಂಗ್ರೆ ಹಾಗೂ ಕಾಂಗ್ರೆಸ್‌ನ ಸಂಗ್ರಾಮ್ ತೊಪ್ಟೆ ಹಾಗೂ ಧೀರಜ್ ದೇಶ್‌ಮುಖ್ ಹಾಗೂ ಬಿಜೆಪಿಯ ರಾಮ್ ಶಿಂಧೆ ಅವರು ಲಕ್ಷಕ್ಕೂ ಹೆಚ್ಚು ಮತ ಗಳಿಸಿದರೂ ಪರಾಭವಗೊಂಡಿದ್ದಾರೆ.

ಪುಣೆ ಹಾಗೂ ಛತ್ರಪತಿ ಸಾಂಭಾಜಿನಗರ ಜಿಲ್ಲೆಗಳಲ್ಲಿ ಸ್ಪರ್ಧೆ ಅತ್ಯಂತ ಬಿರುಸಿನಿಂದ ಕೂಡಿತ್ತು.

ಒಂದು ಲಕ್ಷಕ್ಕೂ ಹೆಚ್ಚು ಮತಗಳನ್ನು ಪಡೆದ ಶರದ್ ಪವಾರ್ ನೇತೃತ್ವದ ಎನ್.ಸಿ.ಪಿ. (ಎಸ್.ಪಿ.) ಪಕ್ಷದ 22 ಅಭ್ಯರ್ಥಿಗಳು ಪರಾಭವಗೊಂಡಿದ್ದಾರೆ. ಕಾಂಗ್ರೆಸ್‌ನ 16 ಅಭ್ಯರ್ಥಿಗಳು ಲಕ್ಷಕ್ಕೂ ಹೆಚ್ಚು ಮತ ಪಡೆದು ಸೋತಿದ್ದಾರೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಪಕ್ಷದ ಏಳು ಅಭ್ಯರ್ಥಿಗಳು ಈ ಪರಿಸ್ಥಿತಿ ಎದುರಿಸಿದ್ದಾರೆ. ಬಿಜೆಪಿಯ ನಾಲ್ವರು ಅಭ್ಯರ್ಥಿಗಳು ಲಕ್ಷಕ್ಕೂ ಹೆಚ್ಚು ಮತ ಪಡೆದರೂ ಸೋತಿದ್ದಾರೆ. ಅಜಿತ್ ಪವಾರ್ ನೇತೃತ್ವದ ಎನ್.ಸಿ.ಪಿ.ಯ ಇಬ್ಬರು ಹಾಗೂ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಯ ಒಬ್ಬರು ಲಕ್ಷ ಮತ ಪಡೆದು ಸೋತಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕ ಪೃಥ್ವಿರಾಜ್ ಚವಾಣ್ ತಮ್ಮ ತವರು ಕ್ಷೇತ್ರವಾದ ಕರಾಡ್ ದಕ್ಷಿಣದಲ್ಲಿ ಸೋಲು ಕಂಡಿದ್ದಾರೆ. ಅವರು 1,00,150 ಮತ ಪಡೆದಿದ್ದರು. ಬಿಜೆಪಿಯ ಅತುಲ್ ಭೋಸೆ ಅವರು 1,39,505 ಮತ ಪಡೆದು ಗೆಲುವು ಸಾಧಿಸಿದ್ದಾರೆ.

ಮಹಾರಾಷ್ಟ್ರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಾಳಾಸಾಹೇಬ್ ಥೋರಟ್ ಅವರು 10,560 ಮತಗಳ ಅಂತರದಿಂದ ಸೋತಿದ್ದಾರೆ. ಶಿವಸೇನೆಯ ಅಮೋಲ್ ಖಟಲ್ ಅವರು 1,12,386 ಮತ ಗಳಿಸಿ ಗೆದ್ದಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕ ಧೀರಜ್ ದೇಶಮುಖ್ ಅವರು ಲಾತೂರ್ ಗ್ರಾಮೀಣ ಕ್ಷೇತ್ರದಲ್ಲಿ 6,595 ಮತ ಗಳ ಅಂತರದಿಂದ ಸೋತಿದ್ದಾರೆ. ಅವರ ಎದುರಾಳಿ ಬಿಜೆಪಿಯ ರಮೇಶ್ ಕರಾಡ್ ಅವರು 1,12,051 ಮತ ಪಡೆದು ಗೆದ್ದಿದ್ದಾರೆ. ದೇಶಮುಖ್ 1,05,456 ಮತ ಪಡೆದಿದ್ದರು.

# ಕರಾಟೆ : ಕು. ಪಾವನಿಗೆ ದ್ವಿತೀಯ ಸ್ಥಾನ



ದಾವಣಗೆರೆ, ನ. 25- ಇಲ್ಲಿನ ತರಳಬಾಳು ನಗರ (6ನೇ ಮೈಲಿಕಲ್ಲು)ದಲ್ಲಿರುವ ಸೊಫ್ರೋ ಶೈನ್ ಕಾನ್ಸೆಪ್ಟ್ ಶಾಲೆಯಲ್ಲಿ ಈಗಲ್ ಫಿಟ್‌ನೆಸ್ ಅಂಡ್ ಮಾರ್ಷಲ್ ಆರ್ಟ್ಸ್ ಆರ್ಗನೈಸೇಷನ್ ಅವರ ವತಿಯಿಂದ ಏರ್ಪಡಿಸಿದ್ದ 3ನೇ ಓಪನ್ ಸ್ಟೇಟ್ ಲೆವೆಲ್ ಕರಾಟೆ ಚಾಂಪಿಯನ್ ಶಿಪ್‌ನ ಕರಾಟೆ ಸ್ಪರ್ಧೆಯಲ್ಲಿ ಕು. ಪಾವನಿ ಆರ್. ಭಾಗವಹಿಸಿ ಕುಮಟೆ ಹಾಗೂ ಕಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
1) ಬನಶಂಕರಿ ಲೇಔಟ್‌ನಲ್ಲಿ 30x40 West 40ಅಡಿ ರೋಡಿಗಿದೆ. 2) ಡಾಲರ್ಸ್ ಕಾಲೋನಿಯಲ್ಲಿ 30x40 North. 3) ವಿವೇಕಾನಂದ ಬಡಾವಣೆಯಲ್ಲಿ 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ವಿಜನ್ ಇಂಟರ್ ನ್ಯಾಷನಲ್ ಎದುರುಗಡೆ 30x40, 30x40 East ಅಕ್ಕ-ಪಕ್ಕ, 60x40 East, Rate - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪ್ಲಂಬಿಂಗ್ ಕ್ಷೇತ್ರದಲ್ಲಿ ಅನುಭವ ಇದ್ದವರಿಗೆ ಮೊದಲ ಆದ್ಯತೆ.
ಸಪ್ತಗಿರಿ ಪೈಪ್ಸ್ ಅಂಡ್ ಟ್ಯಾಪ್ಸ್
ಹದಡಿ ರಸ್ತೆ, ದಾವಣಗೆರೆ.
98446 49626, 90080 58121

**ಬಾಡಿಗೆಗೆ ಇದೆ**
ಪುಷ್ಪಾಂಜಲಿ ಟಾಕೀಸ್ ರೋಡ್ ರೈಲ್ವೆ ಟ್ರ್ಯಾಕ್ ಪಕ್ಕ ಉತ್ತರಾಭಿಮುಖವಾಗಿ 16x36 3 ಮಳಿಗೆ. 1 ಮಳಿಗೆ 32x36 ಪೂರ್ವಾಭಿಮುಖ L ಶೇಪ್ ಕಾರ್ನರ್, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪಾರ್ಕಿಂಗ್ ಇರುತ್ತದೆ. ಪ್ಲೈವುಡ್ ಶಾಪ್, ಹಗ್ಗದ ಅಂಗಡಿ, ಬಳೆ ಶಾಪ್, ಪೈಪ್ ಅಂಗಡಿ ಬಾತ್ ರೂಂ ವ್ಯವಸ್ಥೆ ಇರುತ್ತದೆ.
99451 59582, 99451 99770

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪಕ್ಕ, ಗೀತಂ ಕಾಲೇಜ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x40 ಪೂರ್ವ, 28x30 ಪಶ್ಚಿಮ ಅಕ್ಕ-ಪಕ್ಕ, 60 ಅಡಿ ರಸ್ತೆಗೆ 30x40 ಪಶ್ಚಿಮ, 30x50 ಪಶ್ಚಿಮ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಲೀಸ್‌ಗೆ ಇದೆ**
ಡಬಲ್ ಬೆಡ್ ರೂಮ್‌ಗಳನ್ನು ಹೊಂದಿರುವ ಹೊಸ ಮನೆ ಲೀಸ್‌ಗಾಗಿ ಸಂಪರ್ಕಿಸಿ : ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ, ದಾವಣಗೆರೆ.
95356 10817

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋ ರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6Pm ಬರುವಾಗ ದಯವಿಟ್ಟು ಪೋಟೋ, ಬಯೋಡೇಟಾ ತನ್ನಿ.

**ತಕ್ಷಣ ಬೇಕಾಗಿದ್ದಾರೆ**
ಹೋಲ್‌ಸೇಲ್ ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹಮಾಲರುಗಳು ಬೇಕಾಗಿದ್ದಾರೆ ತಿಂಗಳ ವರಮಾನ 20,000/- ರೂಪಾಯಿಗಳ ತನಕ
94483 40880

**ಬೇಕಾಗಿದ್ದಾರೆ**
ಸಂಸ್ಥೆಯಲ್ಲಿ ಕೆಲಸ ಮಾಡುವವರು ಬೇಕಾಗಿದ್ದಾರೆ. 1. SSLC ಪಾಸ್ ಆಗಿರುವ 30 ವರ್ಷ ಮೇಲ್ಪಟ್ಟ 40 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ. 2. ಯಾವುದೇ ಪದವಿ ಹೊಂದಿದ 40 ರಿಂದ 60 ವರ್ಷದೊಳಗಿನ ಅಥವಾ ನಿವೃತ್ತಿ ಹೊಂದಿದವರು ಬೇಕಾಗಿದ್ದಾರೆ. ಸಂಪರ್ಕಿಸಿ :
74838 09312

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್, ದೂಡಾ ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ವಸತಿ ಇರುತ್ತದೆ.
98445 67456

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಶ್ರೀ ನಂಜುಂಡೇಶ್ವರ ಏಜೆನ್ಸೀಸ್ ಎಂ.ಜಿ. ರೋಡ್, ದಾವಣಗೆರೆ.
98449 13226

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್ ರೈಸ್ ಸೆಂಟರ್ ಇತ್ಯಾದಿಗಳಿಗೆ ಹುಡುಗರು ಬೇಕಾಗಿದ್ದಾರೆ. ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ವಿದ್ಯಾರ್ಹತೆ : SSLC ಉತ್ತೀರ್ಣ, ಸಂಪರ್ಕಿಸಿ :
96860 22969

**ಬಿಜಾಪುರದ ರೊಟ್ಟಿ ಸಿಗುತ್ತದೆ**
ಬಿಸಿ ಮತ್ತು ಖಡಕ್ ರೊಟ್ಟಿ ಹಾಗೂ ಎಲ್ಲಾ ಶುಭ ಸಮಾರಂಭಗಳಿಗೂ ಮಾಡಿಕೊಡಲಾಗುತ್ತದೆ.
97436 21785
98447 48815

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಷ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮತ್ತು ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಬೆಳಿಗ್ಗೆ 7 ರಿಂದ ಮಧ್ಯಾಹ್ನ 1 ಗಂಟೆಗೆ ಯವರೆಗೆ ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರ್‌ಗೆ ಸಂಪರ್ಕಿಸಿ :
84315 29083

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
1. Business development (BD) ಮೆಡಿಕಲ್ ರೆಪ್ ಅಥವಾ ಯಾವುದೇ ಮಾರ್ಕೆಟ್‌ನಲ್ಲಿ ಕನಿಷ್ಠ ಎರಡು ವರ್ಷ ಅನುಭವ - 2 ಹುದ್ದೆ
2. ಪ್ರಮೋಟರ್ - 1 ಹುದ್ದೆ (SSLC or PUC).
(ರೆಸ್ಯೂಮ್‌ನೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿ)
ದಾವಣಗೆರೆ ನೇತ್ರಾಲಯ
ಗುಂಡಿ ಚೌಟ್ರಿ ಪಕ್ಕ, ದಾವಣಗೆರೆ.
83101 60893 /83101 60894

**ಶ್ರೀ ಸಾಯಿ ಕ್ಯಾಟರಿಂಗ್**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಅಡುಗೆ ಮಾಡಿ ಕೊಡಲಾಗುವುದು. ಸಂಪರ್ಕಿಸಿ :
94489 24273


**ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವಣಗೆರೆ.**

**ಕಮರ್ಷಿಯಲ್ ಒ.ಎಸ್. ನಂ. 50/2024**

ವಾದಿ : ಕೆನರಾ ಬ್ಯಾಂಕ್, ಸರಸ್ವತಿ ನಗರ ಶಾಖೆ, ದಾವಣಗೆರೆ. - ವಿರುದ್ಧ-

ಪ್ರತಿವಾದಿ : ಮೆಸರ್ಸ್ ಶ್ರೀ ಸಾಯಿ ಇಂಡಸ್ಟ್ರೀಸ್, ಮಾಲೀಕರು ಶ್ರೀಮತಿ ಶಶಿಕಲಾ ಬಿ ಗಂಡ ಮಂಜುನಾಥ ಡಿ.ಎಸ್. ವಯಸ್ಸು ಸುಮಾರು 45 ವರ್ಷ, ವ್ಯಾಪಾರ, ಮನೆ ನಂ. 868/3, ಶ್ರೀ ಇಂಟರ್‌ನ್ಯಾಷನಲ್ ಹೋಟೆಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ ಸಿಟಿ ಮನೆಯ ವಿಳಾಸ : #3664/2, ಕುಂದುವಾಡ ರಸ್ತೆ, ಮಹಾಲಕ್ಷ್ಮಿ ಲೇಔಟ್, ದಾವಣಗೆರೆ ಸಿಟಿ ಮೊ. : 99024 82839

**ನೋಟಿಸು ಪ್ರಕಟಣೆ**

**ಎದುರುದಾರರು ಇವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಆರ್ಡರ್ 5 ರೂಲ್ 20 (1ಎ) ರ ಮತ್ತು ಕಲಂ 151 ಸಿಪಿಸಿ ಪ್ರಕಾರ ನೋಟಿಸು :**

ಈ ಮೇಲಿನ ಪ್ರಕರಣದಲ್ಲಿ ವಾದಿಯು ಪ್ರತಿವಾದಿಯರ ವಿರುದ್ಧ ಒಟ್ಟು ರೂಪಾಯಿ 14,33,367-82 ವಸೂಲಾತಿಗಾಗಿ ದಾವೆ ಸಲ್ಲಿಸಿದ್ದು, ಅದಕ್ಕೆ ರೂಪಾಯಿ 6,46,055-62ಕ್ಕೆ ಸಾಲಿಯಾನೆ ಶೇಕಡ ಬಡ್ಡಿ 12.45% ರಂತೆ ಮತ್ತು ರೂಪಾಯಿ 4,75,250-19ಕ್ಕೆ ಸಾಲಿಯಾನ ಶೇಕಡ ಬಡ್ಡಿ 12.25% ರಂತೆ ಮತ್ತು ರೂಪಾಯಿ 3,12059-01ಕ್ಕೆ ಸಾಲಿಯಾನ ಶೇಕಡ ಬಡ್ಡಿ 11.25%ರಂತೆ ನ್ಯಾಯಾಲಯದ ಖರ್ಚು ಸಹಿತ ತೀರ್ಪು, ಡಿಕ್ರಿ ಮಾಡಬೇಕೆಂದು ದಿನಾಂಕ 26.4.2024ರಂದು ದಾವೆ ಸಲ್ಲಿಸಲಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಎದುರುದಾರರಿಗೆ ನ್ಯಾಯಾಲಯದಿಂದ ದಾವೆಯ ಶಿರೋನಾಮೆಯಲ್ಲಿ ತಿಳಿಸಿರುವ ವಿಳಾಸಗಳಿಗೆ ನ್ಯಾಯಾಲಯವು ಸಮನ್ಸನ್ನು ಅಮೀನರ ಮೂಲಕ ಮತ್ತು ನೋಂದಣಿ ಅಂಚೆಯ ಮೂಲಕ ಕಳುಹಿಸಿ ಕೊಟ್ಟಿದ್ದು, ಅವುಗಳನ್ನು ನೀವುಗಳು ಉದ್ದೇಶ ಪೂರ್ವಕವಾಗಿ ತೆಗೆದುಕೊಂಡಿರುವುದಿಲ್ಲ ಎಂದು ಅರ್ಜಿ ಸಲ್ಲಿಸಿದ್ದು, ಆ ಪ್ರಕಾರ ನ್ಯಾಯಾಲಯ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ನೀವಾಗಲೀ ಮತ್ತು ನಿಮ್ಮ ವಕೀಲರಾಗಲೀ ದಿನಾಂಕ : 03.01.2025ರಂದು ಬೆಳಿಗ್ಗೆ 11.00 ಗಂಟೆಗೆ ಈ ನ್ಯಾಯಾಲಯ ದಲ್ಲಿ ಹಾಜರಾಗಿ ನಿಮ್ಮ ತಕರಾರುಗಳಿ ದ್ದರೆ, ವಾದಗಳನ್ನು ಮಂಡಿಸುವುದಿದ್ದರೆ, ಅವುಗಳನ್ನು ಸಲ್ಲಿಸಲು ತಿಳಿಸಲಾಗಿದೆ, ಇಲ್ಲವಾದಲ್ಲಿ ಪ್ರಕರಣವನ್ನು ಕಾನೂನು ರೀತಿ ನಿಮ್ಮ ಗೈರು ಹಾಜರಿಯಲ್ಲಿ ಏಕತರ್ಫಿ ಇತ್ಯರ್ಥಪಡಿಸಲಾಗುವುದು ತಿಳಿಯಿರಿ.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 20.11.2024 ರಂದು ನೀಡಲಾಗಿದೆ.

**ಸ್ಥಳ : ದಾವಣಗೆರೆ. ದಿನಾಂಕ : 19.11.2024**
**ಸಹಿ/- ಬಿ. ಆನಂದ್ ಕುಮಾರ್, ಬಿಎಎಲ್‌ಎಲ್‌ಬಿ,**
**ವಾದಿಯರ ಪರ ವಕೀಲರು**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- (ಮುಖ್ಯ ಆಡಳಿತಾಧಿಕಾರಿಗಳು) ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದಾವಣಗೆರೆ.**

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

**ಕ್ರಯಪತ್ರ ಕಳೆದಿದೆ**

ದಾವಣಗೆರೆ ತಾಲ್ಲೂಕು ಬಾತಿ ಗ್ರಾಮದ ವಾಸಿ ಟಿ.ಎನ್. ರಾಜಶೇಖರ್ ಆದ ನಾನು ದಿನಾಂಕ : 22.11.2024ರ ಬೆಳಿಗ್ಗೆ ಸುಮಾರು 11 ಗಂಟೆಗೆ ದೊಡ್ಡಬಾತಿ ಗ್ರಾಮದಿಂದ ನನ್ನ ದ್ವಿಚಕ್ರ ವಾಹನದಲ್ಲಿ ಬರುವಾಗ ಬಾತಿ ಹಾಲಿನ ಡೇರಿ ಹತ್ತಿರ ದ್ವಿಚಕ್ರ ವಾಹನದ ಬ್ಯಾಗಿನಲ್ಲಿ ಇಟ್ಟಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ಕೊತ್ತನೂರು ಗ್ರಾಮದ ವ್ಯಾಪ್ತಿಯಲ್ಲಿರುವ ಆಸ್ತಿ ನಂ. 857/37/12/1 ಅಸೆಸ್‌ಮೆಂಟ್ ನಂ. 857 ಖಾತೆ ನಂ. 6 ಹೌಸ್ ಲಿಸ್ಟ್ ನಂ. 37 ರ ಸ್ವತ್ತಿನ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಮೂಲ ಕ್ರಯ ಪತ್ರ ಸಂಖ್ಯೆ- 1686/2022-23 ಬುಕ್ ನಂ. 1 ಸಿ.ಡಿ. ನಂ. 87 ದಿ : 17.11.2022ರ ಮೂಲ ದಾಖಲೆಗಳು ಕಳೆದಿರುತ್ತವೆ. ಈ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ನಂಬರ್‌ಗೆ ಸಂಪರ್ಕಿಸಲು ಕೋರಿದೆ. **ಮೊ : 97410 80308, ಟಿ.ಎನ್. ರಾಜಶೇಖರ್**


**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

ನೇತ್ರ ದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಿ

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15,000 ವಸತಿ ಉಚಿತ. ಸಂಪರ್ಕಿಸಿ :
97400 98047

**ಕೆಲಸಕ್ಕೆ ಬೇಕಾಗಿದ್ದಾರೆ**
* SSLC ಪಾಸ್ ಆಗಿರುವ 30 ವರ್ಷ ಮೇಲ್ಪಟ್ಟ 40 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ.
* ಯಾವುದೇ ಪದವಿ ಹೊಂದಿದ 40 ರಿಂದ 60 ವರ್ಷದೊಳಗಿನ ಅಥವಾ ನಿವೃತ್ತಿ ಹೊಂದಿದವರು ವ್ಯವಸ್ಥಾಪಕ ಹುದ್ದೆಗೆ ಬೇಕಾಗಿದ್ದಾರೆ.
74838 09312

**CARS FOR SALE**
NEW Hyundai Creta
KIA Seltos diesel
Toyota Innova [V]
Maruthi alto k10
Contact : Daivik Iynahalli
99456 43223

**ಟ್ಯಾಲಿ ಆದವರು ಬೇಕಾಗಿದ್ದಾರೆ**
ರೈಸ್ ಮಿಲ್‌ನಲ್ಲಿ ಅಕೌಂಟ್ ಟ್ಯಾಲಿ ಮಾಡಲು, ಟ್ಯಾಲಿ ಆದವರು ಬೇಕಾಗಿದ್ದಾರೆ. ಕೆಲಸದ ಸಮಯ ಸಂಜೆ 6 ರಿಂದ 8 ರವರೆಗೆ. ಸಂಪರ್ಕಿಸಿ :
94483 45599

**2BHK ಮನೆ ಲೀಜ್‌ಗೆ ಇದೆ**
ಪೆಟ್ರೋಲ್ ಬಂಕ್ ಹಿಂಭಾಗ ಹರಿಹರ.
90088 00080

**OFFICE SPACE FOR RENT**
AC Jayanna & Son Building, 1st Floor, Chamarajpete, Davanagere. Carpet Area : 3050 Sqft. Contact No :
98446 44718, 70190 50911

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**3BHK HOUSE FOR RENT**
At Uttam Badavane, 1st main, B ward No - 30, Avaragere Road. Contact :
99015 64535
94498 04535

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಬೇಕಾಗಿದ್ದಾರೆ**
ಅನುಭವವುಳ್ಳ ಇಂಜೀನಿಯರ್, ಲೇಔಟ್ ಪ್ಲಾನ್ ಹಾಕುವವರು Girls / Boys ಆಕರ್ಷಕ ಸಂಬಳ ಕೊಡುತ್ತೇವೆ. Computer Cad ಹಾಕುವವರು.
99640 05604
96633 12721, 76766 96963

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
#856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

# ಇಂದಿನಿಂದ ಅಂತರ ರಾಷ್ಟ್ರ ಮಟ್ಟದ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ

ದಾವಣಗೆರೆ, ನ.25- ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಾಳೆ ದಿನಾಂಕ 26ರ ಮಂಗಳವಾರದಿಂದ ಬರುವ ಡಿಸೆಂಬರ್ 1ರ ವರೆಗೆ ಅಂತರ್ ರಾಷ್ಟ್ರ ಮಟ್ಟದ ಹೊನಲು ಬೆಳಕಿನ 'ಶಾಮನೂರು ಡೈಮಂಡ್ ಶಿವಗಂಗಾ ಕಪ್-2024' ಲೀಗ್ ಕಂ ನಾಕೌಟ್ ಪಂದ್ಯಾವಳಿ ನಡೆಯಲಿವೆ ಎಂದು ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಸಂಜೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿ ನೆನಪಿಗಾಗಿ 17ನೇ ವರ್ಷದ ಕ್ರಿಕೆಟ್ ಪಂದ್ಯಾವಳಿಯನ್ನು ಅದ್ದೂರಿಯಾಗಿ ಆಯೋಜಿಸಿದ್ದೇವೆ ಎಂದು ಹೇಳಿದರು.

ನಾಳೆ ಮಂಗಳವಾರ ಸಂಜೆ 6.30ಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಅಥಣಿ ವೀರಣ್ಣ, ಚಮನ್‌ಸಾಬ್, ಸೋಗಿ ಶಾಂತಕುಮಾರ್, ಅಯ್ಯೂಬ್ ಪೈಲ್ವಾನ್, ಶ್ರೀನಿವಾಸ್ ಶಿವಗಂಗಾ, ಅಣಬೇರು ರಾಜಣ್ಣ, ಮಹಾದೇವ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದರು.



ಟೂರ್ನಿಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನವಾಗಿ 5,05,555 ರೂ.ಗಳ ನಗದು, ದ್ವಿತೀಯ ಬಹುಮಾನವಾಗಿ 3,05,555 ರೂ.ಗಳ ನಗದು ಮತ್ತು ತೃತೀಯ ಬಹುಮಾನವಾಗಿ 1,55,500 ರೂ.ಗಳ ನಗದು ನೀಡುವ ಜತೆಗೆ ಮೊದಲ ಮೂರು ವಿಜೇತರಿಗೆ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದು ಹೇಳಿದರು.

ಶ್ರೀಲಂಕಾ, ಮಹಾರಾಷ್ಟ್ರ ಹಾಗೂ ರಾಜ್ಯದ ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ತುಮಕೂರು, ಶಿವಮೊಗ್ಗ, ಹುಬ್ಬಳ್ಳಿ, ಸೇರಿದಂತೆ ಒಟ್ಟು 50 ತಂಡಗಳಿಂದ 750 ಆಟಗಾರರು ಭಾಗವಹಿಸಲಿದ್ದಾರೆ, ಅವರಿಗೆಲ್ಲರಿಗೂ ಟಿ-ಶರ್ಟ್ ಹಾಗೂ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಿದ್ದೇವೆ ಎಂದು ಮಾಹಿತಿ ನೀಡಿದರು.

ನಾಳೆ ಮಂಗಳವಾರ ಸಂಜೆ ಒಟ್ಟು 6 ಅಫಿಷಿಯಲ್ ಪಂದ್ಯಾವಳಿಗಳು ನಡೆಯಲಿದ್ದು, ಟೂರ್ನಿಯ ಎಲ್ಲಾ ಪಂದ್ಯಾವಳಿಗಳನ್ನು ಯೂಟ್ಯೂಬ್‌ನಲ್ಲಿ ನೇರ ಪ್ರಸಾರವಾಗಿ ವೀಕ್ಷಿಸಬಹುದಾಗಿದೆ ಎಂದು ಅವರು ವಿವರಿಸಿದರು.

ಇದೇ ದಿನಾಂಕ 30ರ ಸಂಜೆ 7.30ಕ್ಕೆ 'ಶ್ರೀಲಂಕಾ ಮತ್ತು ಇಂಡಿಯಾ' ಪ್ರದರ್ಶನ ಪಂದ್ಯ ನಡೆಯಲಿದೆ ಎಂದ ಅವರು, 30ರಿಂದ 35 ಲಕ್ಷ ರೂ.ಗಳ ವೆಚ್ಚದಲ್ಲಿ ಟೂರ್ನಿಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಂಘದ ಸಹ ಕಾರ್ಯದರ್ಶಿ ಜಯಪ್ರಕಾಶ್, ರಂಗಸ್ವಾಮಿ, ಶಾಂತಕುಮಾರ್, ಜಿ.ಬಿ. ಪಾಟೀಲ್, ರಾಘವೇಂದ್ರ, ಆಕಾಶ್ ಸೇರಿದಂತೆ, ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅವರ ಸವಿ ನೆನಪಿಗಾಗಿ ಏರ್ಪಾಡಾಗಿರುವ 17ನೇ ವರ್ಷದ ಕ್ರಿಕೆಟ್ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳೂ ಸೇರಿದಂತೆ, ಹೊರ ರಾಜ್ಯಗಳಿಂದ ಒಟ್ಟು 750 ಆಟಗಾರರು ಭಾಗವಹಿಸಲಿದ್ದಾರೆ.**

**- ದಿನೇಶ್ ಕೆ.ಶೆಟ್ಟಿ, ಅಧ್ಯಕ್ಷರು, ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘ**

# ಗುಣಮಟ್ಟದ ಕಾಮಗಾರಿಗೆ ಎಸ್ಸೆಸ್ ತಾಕೀತು



ದಾವಣಗೆರೆ, ನ.25- ರಾಜ್ಯ ಸರ್ಕಾರ ನಮ್ಮ ಕ್ಷೇತ್ರಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಅನುದಾನ ನೀಡುತ್ತಿದ್ದು, ಈ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕಾದ ಕರ್ತವ್ಯ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹೇಳಿದರು.

ಸೋಮವಾರ ಮಹಾನಗರ ಪಾಲಿಕೆ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ಸುಮಾರು 2.5 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗುತ್ತಿಗೆದಾರರು ಕಳಪೆ ಕಾಮಗಾರಿ ನಡೆಸದೇ ಗುಣಮಟ್ಟದ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಾಕೀತು ಮಾಡಿದರು.

ಮೇಯರ್ ಕೆ.ಚಮನ್‌ಸಾಬ್ ಮಾತನಾಡಿ, ದಾವಣಗೆರೆಗೆ ಶಾಮನೂರು ಕುಟುಂಬದ ಕೊಡುಗೆ ಸಾಕಷ್ಟಿದ್ದು, ಅವರ ಅಭಿವೃದ್ಧಿ ಚಿಂತನೆ ಇತರರಿಗೆ ಮಾದರಿ. ಸ್ವತಃ ಮುಖ್ಯಮಂತ್ರಿಗಳೇ ದಾವಣಗೆರೆ ಅಭಿವೃದ್ಧಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಆಯುಕ್ತರಾದ ರೇಣುಕಾ ಮಾತನಾಡಿ, ನಗರದ ವಿವಿಧ ಕಡೆಗಳಲ್ಲಿ ಇ-ಸ್ವತ್ತು ಮಾಡಲು ಕೆಲವು ಗೊಂದಲ ಇದ್ದು, ಅವುಗಳನ್ನು ಬಗೆಹರಿಸುವಂತೆ ಸಂಸದರು, ಸಚಿವರು, ಶಾಸಕರು ಸೂಚನೆ ನೀಡಿದ್ದು, ನಾಗರಿಕರು ತಮ್ಮ ದಾಖಲೆಗಳನ್ನು ಸರಿಪಡಿಸಿಕೊಳ್ಳುವಂತೆ ಕರೆ ನೀಡಿದರು.

ಉಪ ಮೇಯರ್ ಸೋಗಿ ಶಾಂತಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಶ್ರೀಮತಿ ಸವಿತಾ ಗಣೇಶ್ ಹುಲ್ಮನಿ, ಶ್ರೀಮತಿ ಆಶಾ ಉಮೇಶ್, ಸದಸ್ಯರುಗಳಾದ ಶ್ರೀಮತಿ ನೂರ್ ಜಹಾನ್ ಬೀ, ಜಾಕೀರ್ ಅಲಿ, ಜಿ.ಡಿ.ಪ್ರಕಾಶ್, ಕಬೀರ್ ಅಲಿ, ದಾದಾಪೀರ್ (ಅಯ್ಯಪ್ಪ ದಾದು) ಶಫೀಕ್ ಪಂಡಿತ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಪನಹಳ್ಳಿ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಟಿ.ವೆಂಕಟೇಶ್



ಹರಪನಹಳ್ಳಿ,ನ.25- ಪಟ್ಟಣದ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ 25ನೇ ವಾರ್ಡಿನ ಸದಸ್ಯ ವಕೀಲ ಟಿ.ವೆಂಕಟೇಶ್ ಮತ್ತು ಸದಸ್ಯರಾಗಿ ಅಬ್ದುಲ್ ರೆಹಮಾನ್, ಗೊಂಗಡಿ ನಾಗರಾಜ, ಉದ್ದಾರ ಗಣೇಶ್, ತಾರಾ ಹನುಮಂತಪ್ಪ, ಲಾಟಿ ದಾದಾಪೀರ್, ಜಾಕೀರ್ ಹುಸೇನ್ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಪುರಸಭೆ ಹಿರಿಯ ಸದಸ್ಯ ಎಂ.ವಿ.ಅಂಜಿನಪ್ಪ ನೂತನ ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಅಭಿನಂದಿಸಿ ಅವರು ಮಾತನಾಡಿದರು.

ಈ ಹಿಂದೆ ಪುರಸಭೆ ಅಧ್ಯಕ್ಷರ ಮೀಸಲಾತಿ ವಿಚಾರದಲ್ಲಿ ಸದಸ್ಯರು ಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ತಂದ ಸಂದರ್ಭದಲ್ಲಿ ಶಾಸಕರು ಮತ್ತು ನಮ್ಮ ಬಗ್ಗೆ ಪಕ್ಷದಲ್ಲಿನ ಕೆಲ ಮೀರ್ ಸಾಧಕರು ಟೀಕೆ ಮಾಡಿ ರಾಜಿನಾಮೆಗೆ ಒತ್ತಾಯಿಸಿದ್ದರು ಎಂದರು.

ರಾಜಕೀಯ ಮೀಸಲಾತಿ ಕೇಳುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಹಕ್ಕು ಇದೆ. ನಾವು ಅದನ್ನು ಪ್ರಶ್ನೆ ಮಾಡುವುದಕ್ಕೆ ಆಗಲ್ಲ ಎಂದ ಅವರು, ಕೋರ್ಟ್ ಮೊರೆ ಹೋಗಿದ್ದ ಸದಸ್ಯರು ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ಕೇಸ್ ವಾಪಸ್ ಪಡೆದಿದ್ದರಿಂದ ತಡೆಯಾಜ್ಞೆ ತೆರವು ಗೊಂಡಿತು. ಆಗ ಶಾಸಕರ ಮಾರ್ಗದರ್ಶನದಲ್ಲಿ ಅಲ್ಪಸಂಖ್ಯಾತರಿಗೆ ಅವಕಾಶ ಮಾಡಿಕೊಡಲಾಯಿತು ಎಂದರು.

ಈ ಹಿಂದೆ ಎಂ.ಪಿ.ರವೀಂದ್ರ ಅವರು ಪುರಸಭೆಗೆ ವಿಶೇಷ ಅನುದಾನ ನೀಡಿದ್ದು ಬಿಟ್ಟರೆ, ಬೇರೆ ಯಾವ ಶಾಸಕರು ಈವರೆಗೆ ಯಾವುದೇ ವಿಶೇಷ ಅನುದಾನ ನೀಡಿಲ್ಲ. ಹಾಗಾಗಿ ಲತಾ ಮಲ್ಲಿಕಾರ್ಜುನ್ ಅವರು ಪುರಸಭೆಗೆ ವಿಶೇಷ ಅನುದಾನ ತಂದು ಪಟ್ಟಣವನ್ನು ಹೆಚ್ಚೆಚ್ಚು ಅಭಿವೃದ್ದಿಗೊಳಿಸಬೇಕೆಂದು ಮನವಿ ಮಾಡಿದರು.

ಈಗಾಗಲೇ ಪಟ್ಟಣಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಟೆಂಡರ್ ಹಂತಕ್ಕೆ ಬಂದಿರುವುದರಿಂದ ಶಾಸಕರಿಗೆ ಅಭಿನಂದನೆ ಸಲ್ಲಿಸಿದ ಅವರು, ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಯತ್ನಿಸ ಬೇಕೆಂದು ಕೋರಿದರು.

ಪುರಸಭೆ ಸದಸ್ಯರಾದ ಅಬ್ದುಲ್ ರೆಹಮಾನ್, ಎಚ್.ಎಂ.ಅಶೋಕ ಮಾತನಾಡಿದರು. ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರು ಪುರಸಭೆ ನೂತನ ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಅಭಿನಂದಿಸಿ, ಶುಭ ಕೋರಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಎಂ.ಪಾತೀಮಾಬೀ ಶೇಕ್ಷಾವಲಿ, ಉಪಾಧ್ಯಕ್ಷ ಎಚ್. ಕೊಟ್ರೇಶ, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಪ್ರವಚನ



ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 30 ವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ಮುಂಡ ಗೋಡಿನ ಅತ್ತಿವೇರಿ ಶ್ರೀ ಬಸವೇಶ್ವರಿ ಮಾತಾಜಿ ಅವರಿಂದ ಪ್ರವಚನ ಏರ್ಪಡಿಸಲಾಗಿದೆ.

## ನಗರದಲ್ಲಿ ಇಂದು ಚದುರಂಗೋತ್ಸವ

ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ರವರೆಗೆ ಪಾಲಿಕೆಯ ಎರಡನೇ ಮಹಡಿಯಲ್ಲಿ 'ಚದುರಂಗೋತ್ಸವ' ಚದುರಂಗ ಸ್ಪರ್ಧೆ ನಡೆಯಲಿದೆ ಎಂದು ಮಹಾಪೌರರಾದ ಕೆ. ಚಮನ್ ಸಾಬ್ ತಿಳಿಸಿದ್ದಾರೆ.

## ಹೊನ್ನಾಳಿ ಪೌರ ನೌಕರರ ಸಂಘದ ಅಧ್ಯಕ್ಷರಾಗಿ ಎ.ಕೆ. ನಾಗರಾಜ್



ಹೊನ್ನಾಳಿ, ನ. 25 - ಪೌರ ಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ಎ.ಕೆ. ನಾಗರಾಜಪ್ಪ ಆಯ್ಕೆಯಾಗಿದ್ದಾರೆ. ಸಂಘದ ಗೌರವಾಧ್ಯಕ್ಷರಾಗಿ ಪುರಸಭೆ ಮುಖ್ಯಾಧಿಕಾರಿ ಲೀಲಾವತಿ ಆಯ್ಕೆಯಾಗಿದ್ದಾರೆ.

ಸಂಘದ ಉಪಾಧ್ಯಕ್ಷರಾಗಿ ಎಸ್. ಒಬಳೇಶ್, ಸಂತೋಷ್, ಕಾರ್ಯದರ್ಶಿ ಇಂಜಿನಿಯರ್ ಸಿ. ದೇವರಾಜ್, ಖಜಾಂಚಿ ಕೆ. ಸಾಕಮ್ಮ, ಸಂಘಟನಾ ಕಾರ್ಯದರ್ಶಿ ರಾಜಶೇಖರ್, ಕಾನೂನು ಸಲಹೆಗಾರ ಆರ್. ಮೋಹನ್ ಆಯ್ಕೆ ಆಗಿದ್ದಾರೆ. ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಪೌರ ಸೇವಾ ನೌಕರರ ಸಂಘದ ರಾಜ್ಯಾಧ್ಯಕ್ಷ ಕೆ. ಪ್ರಭಾಕರ್, ಪುರಸಭೆ ಅಧ್ಯಕ್ಷ ಮೈಲಪ್ಪ ಸೇರಿದಂತೆ ಪೌರಸೇವಾ ನೌಕರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದಿನ ರೆಡ್ ಕ್ರಾಸ್ ಸಭೆ ಮುಂದಕ್ಕೆ

ಇಂದು ನಡೆಯಬೇಕಿದ್ದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ದಾವಣಗೆರೆ ಜಿಲ್ಲಾ ಘಟಕದ ವಾರ್ಷಿಕ ಮಹಾಸಭೆಯನ್ನು ಮುಂದೂಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

## ನಗರದಲ್ಲಿ ಬೌದ್ಧರ ಧಾರ್ಮಿಕ ಹಕ್ಕಿಗಾಗಿ ಪ್ರತಿಭಟನೆ

ಸಂವಿಧಾನ ದಿನಾಚರಣೆ ಪ್ರಯುಕ್ತ ಬೌದ್ಧರ ಧಾರ್ಮಿಕ ಹಕ್ಕಿಗಾಗಿ ಪ್ರತಿಭಟನೆ ಹಾಗೂ ಬಿಟಿ ಕಾಯ್ದೆ-1949ನ್ನು ರದ್ದುಗೊಳಿಸಿ, ಬುದ್ಧ ಗಯಾದ ಮಹಾಬೋಧಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡಲು ಒತ್ತಾಯಿಸಿ ಇಂದು ಬೆಳಿಗ್ಗೆ 11 ಗಂಟೆಗೆ ದೇಶಾದ್ಯಂತ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಗುತ್ತದೆ.

## ನಗರದಲ್ಲಿ ಶಂಕರ್ ಬಿದರಿ : ಮುಖಂಡರ ಭೇಟಿ



ದಾವಣಗೆರೆ, ನ. 25- ನಿವೃತ್ತ ಪೊಲೀಸ್ ಮಹಾ ನಿರ್ದೇಶಕರೂ ಆಗಿರುವ ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಅವರು ಧಾರವಾಡಕ್ಕೆ ತೆರಳುವ ಮಾರ್ಗ ಮಧ್ಯೆ ನಗರದ ಜಿಎಂಐಟಿ ಅತಿಥಿ ಗೃಹಕ್ಕೆ ಇಂದು ಭೇಟಿ ನೀಡಿದ್ದರು.

ಸಮಾಜದ ಮುಖಂಡರುಗಳಾದ ಕಂಚಿಕೆರೆ ಕೊಟ್ರೇಶ್, ಶ್ರೀಮತಿ ಶಶಿಕಲಾ ನಲ್ಕುದುರೆ, ರಶ್ಮಿ ನಾಗರಾಜ್ ಕುಂಕೋದ್, ಜಿಲ್ಲಾ ಕಾರ್ಯದರ್ಶಿ ನೀತು ನಂದೀಶ್ ಬಳ್ಳಾರಿ, ಕಾರ್ಯಕಾರಿಣಿ ದ್ರಾಕ್ಷಾಯಿಣಿ, ಪ್ರಧಾನ ಕಾರ್ಯದರ್ಶಿ ಹಾಲೇಶ್ ಕಾಯಿಪೇಟೆ, ವಿ. ಶಿವಮೂರ್ತಿ ಸ್ವಾಮಿ, ಜಯಣ್ಣಗೌಡರು, ಕೊಟ್ರೇಶ್, ಡೋಲಿ ಚಂದ್ರು, ಮಲ್ಲಿಕಾರ್ಜುನ್ ಅಂಗಡಿ, ಆರ್‌ಎಸ್‌ಎಸ್ ಜಯಕುಮಾರ್ ರೆಡ್ಡಿ, ಸಿ.ಎನ್.ಜಿ. ಪ್ರಕಾಶ್, ರೇವಣಪ್ಪ, ಕಿರಣ್, ಮಲ್ಲಿಕಾರ್ಜುನ್ ಕಟ್ಟಿಮನೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಾಳೆ ವಿಕಲಚೇತನರಿಗೆ ಕ್ರೀಡಾ ಸ್ಪರ್ಧೆ

ದಾವಣಗೆರೆ, ನ. 25 - ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ನಾಳೆ ದಿನಾಂಕ 26 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಮೋತಿ ವೀರಪ್ಪ ಕಾಲೇಜು ಮೈದಾನದಲ್ಲಿ ವಿಕಲಚೇತನರಿಗೆ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಮಹಿಳಾ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ವಿವರಕ್ಕೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ (ದೂರವಾಣಿ : 08192-263936) ಯನ್ನು ಸಂಪರ್ಕಿಸಬಹುದೆಂದು ಜಿಲ್ಲಾ ವಿಕಲಚೇ ತನರ ಹಾಗೂ ಹಿರಿಯ ನಾಗರಿಕರ ಸಬಲೀ ಕರಣಾಧಿಕಾರಿ ಡಾ|| ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.


## ಕನ್ನಡ ಬಾರದ ನೌಕರರು, ಸಾರ್ವಜನಿಕರಿಗೆ ಅಂಚೆ ಮೂಲಕ ಕನ್ನಡ ಶಿಕ್ಷಣ ತರಬೇತಿ


ದಾವಣಗೆರೆ, ನ.25- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ ಮತ್ತು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಗಳು ಒಂದಾಗಿ ಕರ್ನಾಟಕದಲ್ಲಿರುವ ಕನ್ನಡ ಬಾರದ ಎಲ್ಲ ಸರ್ಕಾರಿ ನೌಕರರಿಗಾಗಿ ಹನ್ನೆರಡು ತಿಂಗಳುಗಳ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯನ್ನು ನಡೆಸುತ್ತಿದೆ.

ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ಹೆಸರು ನೋಂದಾಯಿಸಿಕೊಂಡು ಉತ್ತೀರ್ಣರಾದವರಿಗೆ ಕರ್ನಾಟಕ ಲೋಕಸೇವಾ ಆಯೋಗದ ಕನ್ನಡ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.

ಈ ಯೋಜನೆಯನ್ನು ಸಾರ್ವಜನಿಕರಿಗೂ ವಿಸ್ತರಿಸಲಾಗಿದ್ದು, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ, 18 ರಿಂದ 60 ವರ್ಷದೊಳಗಿನ ಆಸಕ್ತರು ಅರ್ಜಿ ಭರ್ತಿ ಮಾಡಿ ಜೊತೆಯಲ್ಲಿ 250 ರೂ. ಡಿಮ್ಯಾಂಡ್ ಡ್ರಾಫ್ಟನ್ನು ಕಳುಹಿಸಿಕೊಡಬೇಕು. ತರಬೇತಿ ಮತ್ತು ಸಂಪರ್ಕ ಶಿಬಿರದ ಕೊನೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಅರ್ಜಿ ನಮೂನೆಯನ್ನು ಪ್ರಭಾರ ಅಧಿಕಾರಿ, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ ಮಾನಸ ಗಂಗೋತ್ರಿ ಇವರಿಗೆ ನ. 30ರ ಒಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 0821-234528 ಗೆ ಕರೆ ಮಾಡಿ ಸಂಪರ್ಕಿಸಬಹುದು.





# ದೀಪದಂತೆ ಪ್ರಜ್ವಲಿಸುವ 'ನಾಮದೇವ ಸಿಂಪಿ' ಸಮಾಜ



ದಾವಣಗೆರೆ, ನ.25- ನಾಮದೇವ ಸಿಂಪಿ ಸಮಾಜ ಸುಸಂಸ್ಕೃತ ಹಾಗೂ ಸಂಸ್ಕಾರವಂತ ಸಮಾಜವಾಗಿದ್ದು, ಎಲ್ಲಾ ಸಮಾಜಗಳ ಮಧ್ಯೆ ದೀಪದಂತೆ ಪ್ರಜ್ವಲಿಸುತ್ತಿದೆ ಎಂದು ಬಿಜೆಪಿ ಕೈಗಾರಿಕಾ ಪ್ರಕೋಷ್ಠದ ರಾಜ್ಯ ಸಂಚಾಲಕ ಕೆ.ಬಿ. ಕೊಟ್ರೇಶ್ ಹೇಳಿದರು.

ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ನಾಮದೇವ ಭಜನಾ ಮಂದಿರದ ಸಭಾಂಗಣದಲ್ಲಿ ನಾಮದೇವ ಸಿಂಪಿ ಸಮಾಜದ ವತಿಯಿಂದ ಇಂದು ಹಮ್ಮಿಕೊಂಡಿದ್ದ 99 ನೇ ಶ್ರೀ ಪಾಂಡುರಂಗ ವಿಠಲ ರುಕ್ಮಿಣಿ ದಿಂಡಿ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಣವೇ ಶಕ್ತಿಯಾಗಿದ್ದು, ಶಿಕ್ಷಣದಿಂದ ಏನೆಲ್ಲಾ ಬದಲಾವಣೆಗಳನ್ನು ತರಲು ಸಾಧ್ಯವಿದೆ. ಇಡೀ ಜಗತ್ತನ್ನೇ ಬದಲಿಸಬಲ್ಲ ಶಕ್ತಿ ಶಿಕ್ಷಣಕ್ಕಿದೆ. ಪ್ರಸ್ತುತ ಮಕ್ಕಳಿಗಾಗಿ ಆಸ್ತಿ ಮಾಡುವ ಬದಲು, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕಾದ ಅಗತ್ಯವಿದೆ. ಅವರಿಗೆ ಸರಿಯಾದ ಶಿಕ್ಷಣ ನೀಡುವ ಮೂಲಕ ಸ್ವಾವಲಂಬಿ ಬದುಕಿಗೆ ದಾರಿ ಮಾಡಿ ಕೊಡಬೇಕಾಗಿದೆ ಎಂದರು.

ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮಾಜದ ಗಣ್ಯರನ್ನು ಗೌರವಿಸುವ ಕಾರ್ಯ ಶ್ಲಾಘನೀಯವಾದುದು. ವಿದ್ಯಾರ್ಥಿಗಳು ಸಂಸ್ಕಾರವಂತರಾಗಿ, ಜೀವನದಲ್ಲಿ ಸಾಧಕರಾಗಿ ಸಮಾಜಕ್ಕೆ ಕೀರ್ತಿ ತರುವಂತಾಗಲಿ ಎಂದು ಹಾರೈಸಿದರು.


ನಾಮದೇವ ಸಿಂಪಿ ಸಮಾಜದ ದೈವ ಮಂಡಳಿ ಅಧ್ಯಕ್ಷರೂ, ಮಾಜಿ ಮಹಾಪೌರರೂ ಆದ ಎಂ.ಎಸ್. ವಿಠಲ್ ಪ್ರಾಸ್ತಾವಿಕವಾಗಿ ಮಾತನಾಡಿ, ನಾಮದೇವ ಸಿಂಪಿ ಸಮಾಜ ಉತ್ಕೃಷ್ಟ ಸಮಾಜವಾಗಿದ್ದು, ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಮೂಲಕ ಉತ್ತೇಜಿಸುವ ಕೆಲಸ ಮಾಡುತ್ತಾ ಬಂದಿದೆ ಎಂದರು.

ನಾಮದೇವ ಸಿಂಪಿ ಸಮಾಜದಲ್ಲಿ ಅನೇಕ ವಿದ್ಯಾರ್ಥಿಗಳು ಪದವಿ, ಸ್ನಾತಕೋತ್ತರ ಪದವಿ ಪಡೆದು, ಉನ್ನತ ಹುದ್ದೆಗಳಲ್ಲಿ ಇದ್ದಾರೆ. ಇದೀಗ ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳು ಮುಂದೆ ಉನ್ನತ ಹುದ್ದೆಗಳನ್ನು ಅಲಂಕರಿಸಿದಾಗ ತಮಗಿಂತ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದ ನೆರವು ನೀಡುವ ಮೂಲಕ ಸಮಾಜದ ಋಣ ತೀರಿಸುವ ಕೆಲಸ ಮಾಡಬೇಕೆಂದು ಹಿತ ನುಡಿದರು.

ನಾಮದೇವ ಸಿಂಪಿ ಸಮಾಜದ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಉಪನ್ಯಾಸಕ ಬಸವರಾಜ್ ಹನುಮಲಿ ಉಪನ್ಯಾಸ ನೀಡಿದರು.

ಸಮಾಜದ ಮುಖಂಡರಾದ ಮಂಜುನಾಥ ಪಿಸೆ, ರಾಘವೇಂದ್ರ, ಮನೋಹರ ಬೊಂಗಾಳೆ, ವಿಠಲ್ ರಾಖುಂಡೆ, ಶಿವಶಂಕರ್, ರೇಣುಕಾಬಾಯಿ ಪಿಸೆ, ಪರಶುರಾಮ್ ಮತ್ತಿತರರು ಉಪಸ್ಥಿತರಿದ್ದರು.

# ನಗರಕ್ಕೆ ಇಂದು ಯಡಿಯೂರಪ್ಪ





ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ 79ನೇ ವರ್ಷದ ಹುಟ್ಟುಹಬ್ಬ ಕಾರ್ಯಕ್ರಮವು ಶಿರಮಗೊಂಡಹಳ್ಳಿ ರಸ್ತೆಯ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಇಂದು ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭಾಗವಹಿಸಲಿದ್ದಾರೆ.

ಬೆಳಿಗ್ಗೆ 8.30ಕ್ಕೆ ಬೆಂಗಳೂರಿನಿಂದ ಹೊರಡುವ ಯಡಿಯೂರಪ್ಪ ಅವರು, ಬೆಳಿಗ್ಗೆ 11.30ಕ್ಕೆ ನಗರವನ್ನು ತಲುಪುವರು. ಮಧ್ಯಾಹ್ನ 12 ಗಂಟೆಗೆ ಎಸ್.ಎ. ರವೀಂದ್ರನಾಥ್ ಅವರ ಶುಭಾಶಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿಗೆ ನಿರ್ಗಮಿಸುವರು.

**ರವೀಂದ್ರನಾಥ್ ಕಾರ್ಯಕ್ರಮ :** ಎಸ್.ಎ. ರವೀಂದ್ರನಾಥ್ ಅವರು ಇಂದು ಬೆಳಿಗ್ಗೆ 9 ಗಂಟೆಗೆ ಶಿರಮಗೊಂಡನಹಳ್ಳಿಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವರು. ಅಲ್ಲಿಂದ ಬೆಳಿಗ್ಗೆ 9.30ಕ್ಕೆ ಶಾಮನೂರು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಬೆಳಿಗ್ಗೆ 10ಕ್ಕೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಅವರು, ಬೆಳಿಗ್ಗೆ 10.30ಕ್ಕೆ ಆವರಗೆರೆಯ ಗೋಶಾಲೆಗೆ ಭೇಟಿ ನೀಡುವರು. ಬೆಳಿಗ್ಗೆ 11ಕ್ಕೆ ನಿಟ್ಟುವಳ್ಳಿಯ ಶ್ರೀ ದುರ್ಗಾಂಬಿಕ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವರು.


ನಂತರ ಬೆಳಿಗ್ಗೆ 11.30ಕ್ಕೆ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಅಭಿಮಾನಿಗಳು ಏರ್ಪಡಿಸಿರುವ ಶುಭಾಶಯ ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಅವರೊಂದಿಗೆ ರವೀಂದ್ರನಾಥ್ ಭಾಗವಹಿಸಲಿದ್ದಾರೆ.









KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas